ಶ್ರೀ ಸಿ. ಬೈರೇಗೌಡ :- ನಾನು ಆಗಲೇ ಮಾತನಾಡತಕ್ಕ ಸಮಯದಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಆ ಸಾಯಿಲ್ ಕನ್ಸರ್‌ವೇಟರ್ ಗೆ ಸಂಬಂಧಪಟ್ಟ ಹಾಗೆ...

ಸಭಾಧ್ಯಕ್ಷರು :- ನಾಳೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಸಿ. ಬೈರೇಗೌಡ :- ಹಣ ಖರ್ಚಾಗುತ್ತಿದೆ; ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ.

ಸಭಾಧ್ಯಕ್ಷರು :- ಅದಕ್ಕೆ ಅವಕಾಶ ಕೊಡುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

1992-93ನೇಸಾಲಿನ ಅನುಪೂರಕ ಅಂದಾಜು ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) :- ಈಗ ಸುಮಾರು 320.57 ಕೋಟಿ ರೂಪಾಯಿಗಳಿಗೆ ಪೂರಕ ಬೇಡಿಕೆಗಳನ್ನು ಮಂಡಿಸಲಾಗಿದೆ. ಅದರಲ್ಲಿ ಕ್ಯಾಷ್ ಡೆಫಿಸಿಟ್‌ಪ್ಲೋ ಇರತಕ್ಕಂಥದ್ದು 218.78 ಕೋಟಿ. ಅದರಲ್ಲಿ ಪ್ಲಾನ್ 104.12 ಕೋಟಿ ನಾನ್ ಪ್ಲಾನ್ 266-45 ಕೋಟಿ. ಈಗ ನಾನ್‌ಪ್ಲಾನ್‌ದು ಹೆಚ್ಚಾಗಿದೆ. ಏಕೆಂದರೆ ಲಾಟರಿಗೆ 82 ಕೋಟಿ, ಕೆ.ಎಸ್.ಆರ್.ಟಿ.ಸಿ. ಗೆ 25 ಕೋಟಿ, ಕೆ.ಇ.ಬಿ.ಗೆ 61 ಕೋಟಿ ಮತ್ತು ಪೆನ್‌ಷನ್‌ಗೆ 34 ಕೋಟಿ. ನಾನ್ ಪ್ಲಾನ್‌ನಲ್ಲಿರುವ 266-45 ಕೋಟಿಯಲ್ಲಿ 202 ಕೋಟಿ ರೂಪಾಯಿ ಈ ಪ್ರಮುಖವಾದಂಥ ಬಾಬುಗಳಿಗೆ ಹೊರಟುಹೋಗಿದೆ. ಅದು ತಾವು ಕೆ.ಇ.ಬಿ. ಗೆ ಹಣ ಕೊಡಬೇಡಿ ಎಂದು ಹೇಳುವುದಕ್ಕಾಗುವುದಿಲ್ಲ. ಹಾಗೆಯೇ ಕೆಎಸ್ಆರ್‌ಟಿಸಿ ಗೆ ಕೊಡಬೇಕಾಗುತ್ತದೆ. ಪೆನ್‌ಷನ್ಸ್‌ಗೂ ಕೂಡ ಕೊಡಬೇಕಾಗುತ್ತದೆ. ಇದು ಹೆಚ್ಚುವರಿ ಬಂದಂಥದ್ದು. ಆಮೇಲೆ ಲಾಟರಿ ಬಗ್ಗೆ ಹೇಳಬೇಕಾದರೆ, ಅದರಲ್ಲಿ ಆದಾಯ ಇದೆ. ಆ ಆದಾಯದ ಹಣವನ್ನು ನಾನ್‌ಪ್ಲಾನ್‌ನಲ್ಲಿ ಪ್ರೈಜ್‌ಗೆ ಕೊಡತಕ್ಕಂಥದ್ದು. ಆದ್ದರಿಂದ Pensions based on AG figures, ಅದು 32 ಕೋಟಿ, payment of prize amount for Single Digit lottery and payment of commission, this is covered by equal receipt--ಅದುಕ್ಯಾಷ್‌ಪ್ಲೋನಲ್ಲಿ ಬರುತ್ತದೆ. 82 ಕೋಟಿ ರೂಪಾಯಿ; Loans to contractors —mobilisation advance - 17.57 ಕೋಟಿ to UKP construction work as per agreement ---ಅದು ರೀ-ಇಂಬರ್ಸ್ ಬಲ್ ಅದು ರೀ - ಇಂಬರ್ಸ್ ಆಗುತ್ತದೆ. ಇನ್ನು ಕೆ.ಎಸ್.ಆರ್.ಟಿ.ಸಿ. ಗೆ subsidy towards total travel concession ಸರ್ಕಾರ ಕೊಡಬೇಕು. ಅದು 25 ಕೋಟಿ ರೂಪಾಯಿಗಳು. Additional capital contribution to KSRTC, 22 ಕೋಟಿ ರೂಪಾಯಿ ಕೊಟ್ಟಿದ್ದೇವೆ. Loans for Ashrya Scheme -- 13.80 ಕೋಟಿ, ಇರಿಗೇಷನ್ ವರ್ಕ್ಸ್‌ನಲ್ಲಿ ಮೈನರ್ಸ್ ಇರಿಗೇಷನ್‌ಗೆ 4.60 ಕೋಟಿ, ಮೇಜರ್ ಇರಿಗೇಷನ್‌ಗೆ 17 ಕೋಟಿ, ರಸ್ತೆಗೆ 11.73 ಕೋಟಿ, ರೂರಲ್ ಎಲೆಕ್ಟ್ರಿಫಿಕೇಷನ್‌ನಲ್ಲಿ Loan subsidy to KEB 61.33 ಕೋಟಿ. ಇನ್ನು ಫ್ಲಡ್ ರಿಲೀಫ್‌ಗೆ 5 ಕೋಟಿ ರೂಪಾಯಿ ಕೊಟ್ಟಿದ್ದೇವೆ. ಮುಜರಾಯಿ ರಿಪೇರಿ ಕನ್ಸ್ಟ್ರಕ್ಷನ್ ಟೆಂಪಲ್‌ಗೆ ಎಂದು ಒಂದು ಕೋಟಿ ರೂಪಾಯಿ. ಅರಣ್ಯಕ್ಕೆ 5 ಕೋಟಿ ರೂಪಾಯಿ, Incentive prize for Sugarcane through sugar factories 6 ಕೋಟಿ ರೂಪಾಯಿ, ವೆಲ್‌ಫೇರ್ ಆಫ್ ಎಸ್.ಸಿ.ಎಸ್.ಟಿ. 9.11 ಕೋಟಿ ರೂಪಾಯಿ; ಆದ್ದರಿಂದ ಈ ಒಂದು ಬಾಬ್ತುಗಳಿಗೆ ಈಗ ಪೂರಕ ಅಂದಾಜುಗಳನ್ನು ನಾವು ಮಂಡಿಸಿದ್ದೇವೆ. ಇದನ್ನು ದಯಮಾಡಿ ಮಂಜೂರು ಮಾಡಿಕೊಡಬೇಕು ಎಂದು ತಮ್ಮ ಮುಖೇನ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ, ಈ ವರ್ಷ ಮೂರು ಸಪ್ಲಿಮೆಂಟರಿ ಎಸ್ಟಿಮೇಟ್‌ಗಳನ್ನು ಮಂಡಿಸಿ, ತಾವು ಈಗಾಗಲೇ ಎರಡಕ್ಕೆ ಮಂಜೂರಾತಿ ತೆಗೆದುಕೊಂಡಿದ್ದೀರಿ. ಇದು ಮೂರನೆಯದು. ಇದನ್ನು ಈಗ ತೆಗೆದುಕೊಂಡು ಬಂದಿದ್ದೀರಿ. ಫಸ್ಟ್ ಸಪ್ಲಿಮೆಂಟರಿ 117 ಕೋಟಿ

ಇತ್ತು. ಆದರಲ್ಲಿ net - outgo was 99.05 ಕೋಟಿ, ಎರಡನೇ ಸಪ್ಲಿಮೆಂಟರಿ 131.93 ಕೋಟಿ ಇತ್ತು, net- outgo was 73,87 ಕೋಟಿ. ಮೂರನೆಯದು ತಾವೇ ಹೇಳಿದ ಹಾಗೆ 370.51 ಕೋಟಿ, net- out go is 218.78 ಕೋಟಿ. ಅಂದರೆ ಈ ವರ್ಷದಲ್ಲಿ ತಾವು 619.50 ಕೋಟಿ ಎಸ್ಟಿಮೇಟ್ಸ್ you have brought and net-out go is Rs. 391.70 ಕೋಟಿ. ನಾನು ಕಳೆದ ಬಾರಿ ಹೇಳಿದ್ದೇನೆ, ಪುನಃ ಅದನ್ನೇ ಇವತ್ತು ಈ ಮನೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ, ಇದನ್ನು ಆದಷ್ಟುಮಟ್ಟಿಗೆ ನೀವು ಕಡಿಮೆ ಮಾಡಬೇಕು; ಇದು ಸರಿಯಲ್ಲ. This shows bad health of your budgetary system. ಸೌಂಡ್‌ನೆಸ್ ಇಲ್ಲ. ನಿಮ್ಮಲ್ಲಿ ಫೈನಾನ್ಸಿಯಲ್ ಡಿಸಿಪ್ಲಿನ್ ಇಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಹಾಗಾಗಿ ನೀವು ಎಷ್ಟು ಕರ್‌ಟೈಲ್ ಮಾಡುವುದಕ್ಕೆ ಸಾಧ್ಯವಿದೆ ಅಷ್ಟನ್ನೂ ಮಾಡಬೇಕಾಗುತ್ತದೆ.

ಈ ವರ್ಷ ಮಾನ್ಯ ಮುಖ್ಯಮಂತ್ರಿಗಳು 42.82 ಕೋಟಿ ಓವರ್‌ಆಲ್ ಡಿಫಿಸಿಟ್ ಆಗಬಹುದು ಎಂದು ಹೇಳಿದ್ದೀರಿ. This was after taking into account normal central and state taxes ನಾನು ಜನರಲ್ ಡಿಸ್ಕಷನ್‌ನಲ್ಲಿ ಪಾಯಿಂಟ್ ಔಟ್ ಮಾಡಿದ್ದೆ. With reference to the financial position of the State, I had stated that in Excise, Commercial Taxes, and Motor Vehicles, there will be a shortfall in collection and therefore your deficit will to go upto Rs. 500-600 crores ಎಂದು ಆಗ ನಿಮಗೆ ವಾರ್ನಿಂಗ್ ಕೊಟ್ಟಿದ್ದೆ. Once the deficit goes up and your borrowings will increase once the borrowings increase, the burden will increase on the exchequer.

ಇವತ್ತು ಈ CIL 74 ತಾವು ತಂದ ನಂತರ your deficit has to be widened. It cannot be restricted to Rs. 42 crores as anticipated by you. ಇವತ್ತು our fear is estimates for revenue expenditure is not forecasted realistically. ನೀವು ರಿಯಲಿಸ್ಟಿಕ್ ಆಗಿ ಫೋರ್‌ಕ್ಯಾಸ್ಟ್ ಮಾಡಿಲ್ಲ. ಡೆಫಿಸಿಟ್ ಹೆಚ್ಚು ಆಗಿದೆ. ನೀವು ಏನು ಮಾಡಬೇಕು? ಇವತ್ತು ನಿಜವಾದ ರೆವಿನ್ಯೂ ಫೋರ್‌ಕ್ಯಾಸ್ಟ್ ಇದೆ, ಅದನ್ನು ತರಿಸಿ ತೋರಿಸಿ. ಹೀಗಾಗಿ ನೀವು you are trying to bring supplementary estimates. ನಾನು ಮತ್ತೊಂದು ಪಾಯಿಂಟ್ ಔಟ್ ಮಾಡುತ್ತೇನೆ. Whether this is good for the health of the State. ನಿಮ್ಮ ಫಸ್ಟ್ ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ಕ್ಯಾಪಿಟಲ್ ಎಕ್ಸ್‌ಪೆಂಡಿಚರ್ 27.48 ಕೋಟಿ ರೂ. ಗಳು. ರೆವಿನ್ಯೂ ಎಕ್ಸಪೆಂಡಿಚರ್ 90.45 ಕೋಟಿ ರೂ.ಗಳು. ಸೆಕೆಂಡ್ ಸಪ್ಲಿಮೆಂಟರಿಯಲ್ಲಿ Capital expenditure had been 20.9 crores and revenue expenditure has been 111.84 crores. ಮೂರನೇ ಸಪ್ಲಿಮೆಂಟರಿಯಲ್ಲಿ Capital Expenditure is just 93 crores; and revenue expenditure is 277 crores . ಅಂದರೆ ಕಳೆದ ಮೂರು ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ above Rs. 500 crores is the revenue expenditure and hardly about 140 crores is capital expenditure. Is it a proper trade? ರೆವಿನ್ಯೂ ಎಕ್ಸ್‌ಪೆಂಡಿಚರ್ ತಾವು ಕರ್ಟೇಲ್ ಮಾಡುತ್ತೇನೆಂದು ಹೇಳಿ ಸಪ್ಲಿಮೆಂಟರಿ ಬಜೆಟ್ ಮುಖಾಂತರ ಇವತ್ತು 600 ಕೋಟಿ ಕ್ಯಾಪಿಟಲ್ ಎಕ್ಸ್‌ಪೆಂಡಿಚರ್ ಪೈಕಿ 500 ಕೋಟಿ ರೆವಿನ್ಯೂ ಎಕ್ಸಪೆಂಡಿಚರ್ ಮಾಡಿ ಕೇವಲ 100 ಕೋಟಿ ಕ್ಯಾಪಿಟಲ್ ಎಕ್ಸ್‌ಪೆಂಡಿಚರ್ ತೋರಿಸಿದರೆ ಏನು ಆಗುತ್ತದೆ? This shows your bad financial management of the funds. It shows that the proper forecasts have not been made. It shows you are not able to control the non-plan expenditure. ಈ ಪ್ರಕಾರ ಆದರೆ how are you going to improve your finances? How are you going to support the irrigation projects or power projects in the budget?

ಹಾಗಾಗಿ ನಾನು ಹೇಳುತ್ತಿದ್ದೇನೆ. ಈ ಒಂದು ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಏನು ಇವೆ just to curtail the deficit, just to show that the deficit is at the minimum level you are trying for a backdoor entry and you are trying to bring the supplementary estimates with this huge amount. ಇವತ್ತು ತಾವು ಕೆಲವು ಹಣದ ಬಗ್ಗೆ ಹೇಳಿದಿರಿ. ಸಾಧನಾ ಸಮಾವೇಶಕ್ಕೆ ಖರ್ಚಾದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಬೇಕು. ತಾವು ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ಎಲ್ಲಾ ಹೇಳಿದಿರಿ. ಕೆಇಬಿ ಬಗ್ಗೆ ಹೇಳಿದಿರಿ, ವಾಟರ್‌ಸಪ್ಲೈ ಬಗ್ಗೆ ಹೇಳಿದಿರಿ, ಜಾಣತನ ನಿಮ್ಮದು. ನೀವು ಈ 1 ಕೋಟಿ 29 ಲಕ್ಷವನ್ನು ನಿಮ್ಮ ಸರ್ಕಾರ ಸಾಧನಾ ಸಮಾವೇಶದ ಮೇಲೆ ಖರ್ಚು ಮಾಡಿದ್ದು ಹೇಳಲಿಲ್ಲ.

ಶ್ರೀ ಹೆಚ್. ಏಕಾಂತಯ್ಯ :- ನೀವು ಹೇಳುತ್ತೀರಿ ಎಂದು ಕೈಬಿಟ್ಟರು.

ಶ್ರೀ ಆರ್.ವಿ.ದೇಶಪಾಂಡೆ :- ನಾನು ಇವತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. one of the charges ನಿಮ್ಮದು ಏನು ಇತ್ತು; ಏನು ತಮ್ಮ ಭಾಷಣ on the previous Government. ಈ ಬ್ಯಾಷ್ ಮಾಡಿದರು ಈ ಬ್ಯಾಷ್ ಮಾಡಬಾರದಿತ್ತು. ಗವರ್ನಮೆಂಟ್ ಮೆಷಿನರಿ ಮಿಸ್‌ಯೂಸ್ ಮಾಡಿದರು ಎಂದು ತಾವೇ ನಿಮ್ಮ ಪ್ರೀವಿಯಸ್ ಕೊಲೀಗ್ ಮೇಲೆ ಛಾರ್ಜ್ ಮಾಡಿ ಅಧಿಕಾರಕ್ಕೆ ಬಂದಿರಿ. You have given a memorandum to your Prime Minister. ಈ ಬ್ಯಾಷ್ ಮಾಡಿದ್ದು ತಪ್ಪು, ಈ ಬ್ಯಾಷ್ ಮಾಡಿದಾಗ ನಿಮ್ಮ ಸಹೋದ್ಯೋಗಿಗಳೆಲ್ಲರೂ ಹಂಗರ್‌ಸ್ಟ್ರೈಕ್ ಮಾಡಿದರು, ಎಷ್ಟೋ ಜನ ಎಂ.ಎಲ್.ಎ. ಗಳು ಬಾಯ್‌ಕಾಟ್ ಮಾಡಿದರು. ಇವೊತ್ತು ತಾವು ಯಾವ ಮನಸ್ಸಿನಿಂದ ಇದನ್ನು ಇಲ್ಲಿ ಮಂಡಿಸಿದಿರಿ? ನಿಜವಾಗಿ if you are not hypocrite please don't tax the people. Of this one crore 29 lakhs. ಆ ಟ್ಯಾಕ್ಸ್ ಹಾಕಬೇಡಿ, ವಿತ್‌ಡ್ರಾ ಮಾಡಿ. ಇದಕ್ಕೆ ಯಾರು ಜವಾಬ್ದಾರರಾಗಿದ್ದಾರೆ, ಅವರ ಕಡೆಯಿಂದ ಈ 1 ಕೋಟಿ 29 ಲಕ್ಷ ರೂಪಾಯಿಗಳನ್ನು ವಸೂಲು ಮಾಡಿ. ಹಾರ್ನಳ್ಳಿ ರಾಮಸ್ವಾಮಿಯವರೇ, ಈ ರೀತಿ ಬ್ಯಾಷ್ ಮಾಡಿದ್ದು ಸರಿಯಲ್ಲವೆನ್ನುವ ಬಗ್ಗೆ ತಮ್ಮದೂ ಒಂದು ಆರ್ಗ್ಯುಮೆಂಟ್ ಇತ್ತು. ಇವೊತ್ತು ಈ ಸಪ್ಲಿಮೆಂಟರಿ ಎಸ್ಟಿಮೇಟ್‌ಗೆ ತಾವುಗಳೆಲ್ಲರೂ ಸಪೋರ್ಟ್ ಮಾಡುತ್ತಿದ್ದೀರಿ. ತಾವು ಈ ಹಿಂದೆ ಏನು ಹೇಳಿದ್ದೀರಿ, ಅದಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತಿದ್ದೀರಿ, ಇದು ಸರಿಯೇ? I am appealing to the conscience of all the Members of the House that they should vote against this Rs. 1.29 crore because once you have agitated. ನಾವೂ ಇದರ ಬಗ್ಗೆ ಚಳುವಳಿ ಮಾಡಿದ್ದೇವೆ. ನಾವೂ ಹಂಗರ್ ಸ್ಟ್ರೈಕ್ ಕುಳಿತಿದ್ದೆವು, ನೀವೂ ಕುಳಿತಿದ್ದೀರಿ. ಯಾವ ಪ್ರಕಾರ ಇದಕ್ಕೆ ನೀವು ಮಾನ್ಯತೆ ಕೊಡುತ್ತಿದ್ದೀರಿ? ಇದಕ್ಕೆ ಮಾನ್ಯತೆಕೊಟ್ಟರೆ ಇಲ್ಲಿ ಮಾತನಾಡುವುದಕ್ಕೆ ನಿಮಗೆ ಏನು ಮೊರಲ್ ರೈಟ್ ಇದೆ. you recover from the person whohas spent. ಸಾಧನಾ ಸಮಾವೇಶದ ಬಗ್ಗೆ ಏನು ಇವೊತ್ತು ಹಣ ತೆಗೆದುಕೊಳ್ಳುತ್ತಿದ್ದೀರಿ, ಅದಕ್ಕೆ ನಮ್ಮ ಸಂಪೂರ್ಣ ವಿರೋಧವಿದೆ; ಈ ಕುರಿತು ನಾನು ಸ್ಪಷ್ಟೀಕರಣ ಬಯಸುತ್ತೇನೆ. ನೀವು ಯಾವ ಪ್ಲಾನ್ ಮೇಲೆ ಅಧಿಕಾರಕ್ಕೆ ಬಂದಿರಿ, ರಾಜಶೇಖರ ಮೂರ್ತಿಯವರೇ, 1 ಕೋಟಿ 29 ಲಕ್ಷ ರೂಪಾಯಿಗಳ ಬ್ಯಾಷ್ ಹಣಕ್ಕೆ ತಾವು ವೋಟ್ ಮಾಡಬೇಕು. You all opposed this; To-day you are doing something against your conscience. Therefore, I want this to be opposed by all the Members of the House; I give an appeal. ಹಾಗಾಗಿ, ಮಾನ್ಯ ಮುಖ್ಯಮಂತ್ರಿಗಳು ಬಹಳ ಜಾಣತನದಿಂದ ಹೇಳಿದರು. You have given for the Platinum Jubilee Celebrations of the Mysore University. ಇದಕ್ಕೆ ನನ್ನ ಅಬ್ಜೆಕ್ಷನ್ ಇಲ್ಲ. This is one of the old Universities. ಅದು ರೆಪ್ಯುಟೆಡ್ ಯೂನಿವರ್ಸಿಟಿ ಆಗಿದೆ, ಅದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ I have no objection. ನಿಮ್ಮ ಸರ್ಕಾರ ಕಷ್ಟದಲ್ಲಿದ್ದಾಗ, ಅಭಿವೃದ್ಧಿ ಕಾರ್ಯಗಳಿಗೆ ಹಣವಿಲ್ಲ, ಪ್ರಾಜೆಕ್ಟ್‌ಗಳಿಗೆ ಹಣವಿಲ್ಲ, ಫ್ಲಡ್ ಬಂದು ರೈತರು ಏನು ಸತ್ತರು, ಅವರಿಗೆ ಕೊಡುವುದಕ್ಕೆ ಹಣ ಇಲ್ಲ, ಇಂತಹ ಸಂದರ್ಭದಲ್ಲಿ ಪ್ಲಾಟಿನಮ್ ಜ್ಯೂಬಿಲಿ ಮಾಡುವುದಕ್ಕೆ ಒಂದು ಕೋಟಿ

ರೂಪಾಯಿಗಳನ್ನು ಕೊಡುವುದು ಸರಿಯೇ? ಇಷ್ಟೇ ನಾನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆಯೇ, ವಿನಾ ಏಕೆ ಕೊಟ್ಟಿರಿ? ಎಂದು ನಾನು ಕೇಳುತ್ತಿಲ್ಲ. This is not situation-- ಅಲ್ಲದೆ, 'ಆಶ್ರಯ' ಯೋಜನೆಗಾಗಿ ಕರ್ನಾಟಕ ಹೌಸಿಂಗ್ ಬೋರ್ಡ್‌ಗೆ ಪುನಃ 5ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ತುಂಬಾ ಸಂತೋಷ. ಆದರೆ, ಈಗಾಗಲೇ 23 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಲ್ಲಾ, ಅದು ಏನಾಗಿದೆ? ಆ ಬಗ್ಗೆ ಇವೊತ್ತು ಸಿ.ಓ.ಡಿ. ತನಿಖೆ ನಡೆಯುತ್ತಿದೆ. ಈ ಸಿ.ಓ.ಡಿ. ತನಿಖೆಯಲ್ಲಿ ಕಂಟ್ರಾಕ್ಟರುದಾರರನ್ನು ಬಂಧಿಸಲಾಗಿದೆ, ಅಧಿಕಾರಿಗಳನ್ನು ಬಂಧಿಸಲಾಗಿದೆ. ಆದರೆ, ಇದರ ಮುಖ್ಯ ಸೂತ್ರದಾರರು ಯಾರಿದ್ದಾರೆ ಅವರ ಮೇಲೆ ಏನೂ ಕ್ರಮ ಕೈಗೊಂಡಿಲ್ಲ. ಅವರನ್ನು ಹಿಡಿದು ಬಂಧಿಸಿಲ್ಲ. ಅಷ್ಟೇ ಅಲ್ಲ, ಈ ಯೋಜನೆಗೆ 5 ಕೋಟಿ ರೂಪಾಯಿಯಲ್ಲ, 50 ಕೋಟಿ ರೂಪಾಯಿಗಳನ್ನಾದರೂ ಕೊಡಿ, ನಾವು ಬೆಂಬಲಿಸುತ್ತೇವೆ. ಆದರೆ, ಈಗಾಗಲೇ ಕೊಟ್ಟಿದ್ದ 23 ಕೋಟಿ ರೂಪಾಯಿಗಳು ಎಲ್ಲಿ ಹೋಗಿದೆ? 23ಕೋಟಿ ರೂಪಾಯಿಗಳಲ್ಲಿ ನಾಗರಾಜ್ ಎಂಬ ಕಂಟ್ರಾಕ್ಟರ್‌ಗೆ 5 ಕೋಟಿ 18 ಲಕ್ಷ ರೂಪಾಯಿ ಹೋಗಿದೆ. ಅವರಿಂದ ಎಷ್ಟು ಹಣ ವಸೂಲು ಮಾಡಿದಿರಿ? ಅದನ್ನು ಮೊದಲು ವಸೂಲು ಮಾಡಿ. You are accountable to this House. You have to explain us. Mere arrest of contractors, mere arrest of Officers will not solve the problem... ಈ ಹಣ ಹಂಚಿದ್ದಾರೆ, ಆದ್ದರಿಂದ ಈ ಹಣವನ್ನು ಕಂಟ್ರಾಕ್ಟ್‌ದಾರರುಗಳಿಂದ ವಸೂಲು ಮಾಡುವುದಕ್ಕೆ ಯಾವ ಪ್ರಯತ್ನ ಮಾಡಿದ್ದೀರಿ ಎಂಬುದನ್ನು ಹೇಳಿ. ಪ್ರಯತ್ನ ಮಾಡಿದ್ದು ಸರಿಯಿದ್ದರೆ 5 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಬೆಂಬಲಿಸುತ್ತೇವೆ. ಇಲ್ಲದಿದ್ದರೆ, 23ಕೋಟಿ ರೂಪಾಯಿಗಳನ್ನು ಏಕೆ ಕೊಟ್ಟಿರಿ? ಅವರು ದುಡ್ಡು ತಿಂದರು, ಒಂದೂ ಮನೆಯನ್ನು ಕಟ್ಟುವುದಕ್ಕಾಗಿಲ್ಲ, ಇದರಲ್ಲಿ ಅವ್ಯವಹಾರವೆಸಗಿರುವ ವ್ಯಕ್ತಿಗಳನ್ನು ಕೇವಲ ಬಂಧಿಸಿದ್ದೀರಿ ಯಾರು 5 ಕೋಟಿ ರೂಪಾಯಿಗಳನ್ನು ಹೊಡೆದುಕೊಂಡು ಹೋಗಿದ್ದಾರೆ, public money which is squandered... ಹಾಗಾಗಿ, 5 ಕೋಟಿ ರೂಪಾಯಿಗಳನ್ನು ಏನು ಕೊಟ್ಟಿದ್ದೀರಿ, ಅದರ ಬಗ್ಗೆ ನನ್ನ ವಿರೋಧವಿಲ್ಲ. ಆದರೆ, ಈಗಾಗಲೇ ಕೊಟ್ಟಿರುವ 23 ಕೋಟಿ ರೂಪಾಯಿಗಳೇನಿದೆ, ಇದನ್ನು ವಸೂಲು ಮಾಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆಯೆಂಬುದು ಗೊತ್ತಾಗಬೇಕು. ಇನ್ನು ಗೋವಾ ಫ್ರೀಡಮ್ ಫೈಟರ್ಸ್‌ಗೆಂದು 1 ಕೋಟಿ 50 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ, ಕೊಡಿ. ಆದರೆ, ಇವೊತ್ತು ಏನಾಗಿದೆಯೆಂದರೆ, ಎಷ್ಟೋ ಜನ ಗೋವಾ ಫ್ರೀಡಮ್ ಮೂವ್‌ಮೆಂಟ್‌ನಲ್ಲಿ ಸುಳ್ಳು ಅಪ್ಲಿಕೇಷನ್ ಕೊಟ್ಟು ಮಿಸ್-ಯೂಸ್ ಮಾಡಿದ್ದಾರೆ. ಫಾಲ್ಸ್ ಅಪ್ಲಿಕೇಷನ್ಸ್ ತೆಗೆದುಕೊಂಡಿದ್ದು, ಈಗಾಗಲೇ ಅದರ ಮೇಲೆ ಆರ್ಡರ್ಸ್ ಆಗಿದೆ. ಅದರ ಬಗ್ಗೆ ಏನು ಮಾಡುತ್ತೀರಿ ಹೇಳಿ? ಸತ್ಯವಂತರಾದ ಜನರು ಯಾರೂ ಇಲ್ಲ, ಅವರಿಗೆ ಬೇಕಾದರೆ ಒಂದು ನೂರು ರೂಪಾಯಿಗಳನ್ನು ಜಾಸ್ತಿ ಕೊಡಿ, ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಗೋವಾ ಫ್ರೀಡಂ ಹೋರಾಟದಲ್ಲಿ ಯಾರು ನಿಜವಾಗಿ ಹೋಗಿದ್ದಾರೆ ಅವರಿಗೆ ಈ ಹಣ ಸಿಗಬೇಕು. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ವಿಚಾರ ಮಾಡಲು ಪ್ರಾರಂಭ ಮಾಡಿದ್ದಾರೆಂದು ನನಗೆ ತಿಳಿದು ಬಂದಿದೆ, ಇದರ ಬಗ್ಗೆ ಆದಷ್ಟು ಬೇಗ ವಿಚಾರಣೆ ಮಾಡಿ. ಅರ್ಹರಾದ ಅರ್ಜಿದಾರರು ಯಾರಿದ್ದಾರೆ ಅವರಿಗೆ ಇದು ಸಿಗುತ್ತಿಲ್ಲ, ಆದ್ದರಿಂದ ಅರ್ಹರಾದವರಿಗೆ ಕೊಡುವ ವ್ಯವಸ್ಥೆಯಾಗಬೇಕು. ಮಾನ್ಯ ಹಾರನಹಳ್ಳಿ ರಾಮಸ್ವಾಮಿಯವರೇ,ತಾವೂ ಕೂಡ ಸ್ವಾತಂತ್ರ್ಯ ಹೋರಾಟಗಾರರು, ನಾನು ಗೋವಾ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಹೇಳುತ್ತಿದ್ದೇನೆ, ಅವರುಗಳಿಗೆ ಪೆನ್‌ಷನ್‌ನನ್ನು ಕೊಡುವುದು ಬಹಳ ಒಳ್ಳೆಯ ಕಾರ್ಯಕ್ರಮ. ನಾನೇ ಮೊದಲು ಈ ವಿಷಯವನ್ನು ರೈಸ್ ಮಾಡಿದ್ದು, ನಾನೇ ಇದರ ಬಗ್ಗೆ ಮೊದಲು ಸರ್ಕಾರಕ್ಕೆ ಬರೆದಿದ್ದೆ, ಭಾರತ ಸರ್ಕಾರಕ್ಕೆ ಬರೆದಿದ್ದು, ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರಪಾಟೀಲ್ ಮತ್ತು ಬಂಗಾರಪ್ಪನವರು ಇದ್ದಾಗ ನಾನೇ ಇದರ ಬಗ್ಗೆ ಬರೆದಿದ್ದು, ತಾವು ಅವರಿಗೆ ಪೆನ್‌ಷನ್ ಕೊಡುವ ಒಳ್ಳೆಯ ಕೆಲಸ ಮಾಡಿದ್ದೀರಿ, ಸಂತೋಷ. ಆದರೆ ಇದರಲ್ಲಿ ದುರುಪಯೋಗವಾಗುತ್ತಿದೆ, ಯಾರು ಗೋವಾ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿಲ್ಲ, ಅವರಿಗೆ ಪೆನ್‌ಷನ್ ಕೊಟ್ಟಿದ್ದೀರಿ, ಯಾರು ನಿಜವಾಗಿಯೂ ಹೋರಾಟಗಾರರಾಗಿದ್ದಾರೆ ಅವರಿಗೆ ಬೇಕಾದರೆ ನೂರು ರೂಪಾಯಿ ಹೆಚ್ಚಾಗಿ ಕೊಡಿ; ಅದಕ್ಕೆ ನಮ್ಮ ತಕರಾರು ಇಲ್ಲ, ಇವತ್ತು ಎಲ್ಲಾ ಸ್ವಾತಂತ್ರ್ಯ ಚಳುವಳಿಗಾರರಿಗೆ ಪೆನ್‌ಷನ್ ಕೊಡುವುದನ್ನು ಬಂದ್ ಮಾಡಿದ್ದೀರಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಗೋವಾ ಸ್ವಾತಂತ್ರ್ಯ ಚಳುವಳಿಯ ಹೆಸರಿನಲ್ಲಿ ಅರ್ಜಿಯನ್ನು ಹಾಕಿ ಪೆನ್‌ಷನ್ ಕೇಳುತ್ತಿದ್ದಾರಲ್ಲಾ, ಅವರಿಗೆ ಮುಂದೆ ಯಾರಿಗೂ ಕೂಡ ಅದನ್ನು ಕೊಡಬಾರದೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಮತ್ತು ಈಗಾಗಲೇ ಕೊಟ್ಟಿದ್ದೇವಲ್ಲಾ, ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ನೂರಕ್ಕೆ ತೊಂಬತ್ತೊಂಬತ್ತು ಜನರು ಇದನ್ನು ಪಡೆಯಲು ಅರ್ಹರಾಗಿಲ್ಲ. ನಾವುಗಳು, ಗೋವಾ ಗಡಿಯವರಗೆ ಹೋದೆವು. ಅಲ್ಲಿಂದ ಅವರು ವಾಪಸ್ ಹೋಗಿ ಎಂದಾಗ ನಾವು ವಾಪಸ್ ಬಂದೆವು, ನಾವೂ ಕೂಡ ಹೋರಾಡಿದ್ದೇವೆ, ನಮಗೆ ಪೆನಷನ್ ಕೊಡಿ ಎಂದು ಬಂದಿದ್ದಾರೆ. ಅದು ಏನಾಗಿದೆ ಎಂದು ಹೇಳುವುದು ಬೇಡ. ಆದರೆ ಅದರ ಬಗ್ಗೆ ನಾವು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎ.ಕೆ. ಅನಂತಕೃಷ್ಣ :- ಗೋವಾ ಗಡಿಯವರೆಗೆ ಹೋಗುವುದಿರಲಿ, ನಮ್ಮ ಬಳೇಪೇಟೆಯವರೆಗೂ ಸಹ ಹೋಗಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ :- ಯಾರು ಅರ್ಹರಿದ್ದಾರೆ ಅವರಿಗೆ ಕೊಡಿ. ಯಾರಿಗೂ ಕೊಡಬಾರದೆಂದು ನಾನು ಹೇಳಲಿಲ್ಲ. ಯಾರು ನಿಜವಾಗಿಯೂ ಹೊರಾಟ ಮಾಡಿದ್ದಾರೆ ಅವರಿಗೆ ಕೊಡಿ, ಆದರೆ ಯಾರು ಅರ್ಹರಿಲ್ಲ. ಅವರಿಗೆ ಕೊಡಬೇಕಾದ ಅವಶ್ಯಕತೆ ಇಲ್ಲ. ಇವತ್ತು ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ Supplementary estimates appeared to be covering the huge deficit, which you could not forecast in the beginning of the year. The Government should come with a White Paper on the financial position of the State Government. ಅದರ ಸಲುವಾಗಿ ಇಂಥ ಸಪ್ಲಿಮೆಂಟರಿ ಎಸ್ಟಿಮೇಟನ್ನು ತರುತ್ತಿದ್ದಾರೆ. ಹಾಗಾಗಿ ಇವತ್ತು ಸರ್ಕಾರ ಹಣಕಾಸಿನ ಬಗ್ಗೆ ನಿಜವಾದ ಹೇಳಿಕೆಯನ್ನು ಹೇಳುತ್ತಿಲ್ಲ. ನಾನು ಹಿಂದೆಯೂ ಹೇಳಿದ್ದೇನೆ, ಇವತ್ತೂ ಕೂಡ ಹೇಳುತ್ತಿದ್ದೇನೆ. The Government should come out with a White Paper as far as the financial position of the State is concerned. ಅದನ್ನು ಕೊಟ್ಟರೆ ಮಾತ್ರ ನಮಗೆ ನಿಜವಾದ ಹಣಕಾಸಿನ ಪರಿಸ್ಥಿತಿ ಇವತ್ತು ಏನು ಇದೆ ಎನ್ನುವುದು ಗೊತ್ತಾಗುವುದು. just to curtail the real deficit at the beginning of the year,such supplementary estimates are being brought. ಅಧ್ಯಕ್ಷರೇ, ಉದಾಹರಣೆಗೆ ಮುಖ್ಯಮಂತ್ರಿಗಳು ಕೆ.ಇ.ಬಿ. ಯ ಬಗ್ಗೆ ಹೇಳಿದ್ದಾರೆ. The Government is to provide funds to ensure 3% returns on the assets of the K.E.B. ಕ್ಯಾಪಿಟಲ್ ಅಸೆಟ್‌ನಲ್ಲಿ 3 ಪರ್‌ಸೆಂಟ್ ಹಣವನ್ನು ಕೆ.ಇ.ಬಿ. ನವರು ಸರ್ಕಾರಕ್ಕೆ ಕೊಡಬೇಕು, ಆದರೆ ತಾವು ಏನು ಮಾಡುತ್ತಿದ್ದೀರೆಂದರೆ ಈ ಕೆ.ಇ.ಬಿ. ಎನ್ನುವ ಬಿಳಿಯ ಆನೆಯನ್ನು ಸಾಕುವುದಕ್ಕಾಗಿ ನೀವೇ ಅವರಿಗೆ 3 ಪರ್‌ಸೆಂಟ್ ಹಣವನ್ನು ಕೊಡಲು ಫಂಡನ್ನು ಮಾಡುತ್ತಿದ್ದೀರಿ, ಇದು ಸರಿಯೇ? ಕೆ.ಇ.ಬಿ. ಯಲ್ಲಿ ನಷ್ಟವಾಗಿರಬಹುದು, ಆದರೆ ಕನಿಷ್ಟಪಕ್ಷ 3 ಪರ್‌ಸೆಂಟ್ ಕ್ಯಾಪಿಟಲ್ ಅಸೆಟ್ ಮೇಲೆ ಸರ್ಕಾರಕ್ಕೆ under the Indian Electricity Act, ಏನು ಮ್ಯಾನ್‌ಡೇಟರಿ ಪ್ರೊವಿಷನ್ ಇದೆ; ಆ ರೀತಿ ಕೊಡುವ ಶಕ್ತಿ ಕೆ.ಇ.ಬಿ. ಗೆ ಇಲ್ಲ. ಹಾಗಾದರೆ ಕೆ.ಇ.ಬಿ. ಏಕೆ ಇರಬೇಕು? ಇವತ್ತು ಆ ಹಣ ನಿಮಗೆ ಅಲ್ಲಿಂದ ಬರಬೇಕು, ಆದರೆ ನೀವು ಅವರಿಗೇ ಹಣವನ್ನು ಕೊಟ್ಟು ವಾಪಸ್ ಹಣವನ್ನು ತರಿಸಿಕೊಳ್ಳುತ್ತಿದ್ದೀರಿ, ಇದು ಸರಿಯಲ್ಲ, ಇದರಿಂದಾಗಿ ಕೆ.ಇ.ಬಿ. ಯಲ್ಲಿ ದುರ್ವ್ಯವಹಾರ ಹೆಚ್ಚಾಗಬಹುದು, ಬೇಜವಾಬ್ದಾರಿ ಹೆಚ್ಚಾಗಬಹುದು, ಕೆ.ಇ.ಬಿ. ಯ ಮೇಲೆ ನಿಮಗೆ ನಿಜವಾಗಿಯೂ ಹಿಡಿತವಿರಬೇಕಾದರೆ ಅವರಿಗೆ ನೀವು ಹೇಳಬೇಕಾಗುತ್ತದೆ. every year you will have to pay 3% on the capital assets as Mandatory under the Indian Electricity Act. ಈ ರೀತಿ ನಾವು ಕೆ.ಇ.ಬಿ. ಗೆ ಹೇಳಿ 3 ಪರ್‌ಸೆಂಟ್ ಹಣವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆಗ ಮಾತ್ರ ನೀವು ಕೆ.ಇ.ಬಿ. ಯಲ್ಲಿ ದಕ್ಷತೆಯನ್ನು ತಂದಿದ್ದೀರಿ ಎಂದು ಹೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ನಿಮ್ಮ ಮೂರು ಪರ್ಸೆಂಟ್ ಕೆ.ಇ.ಬಿ.ಹಣವನ್ನು ಜನರೇಟ್ ಮಾಡುವುದಕ್ಕೆ ಸರ್ಕಾರ ಹಣವನ್ನು ಕೊಡುತ್ತಿದೆ. ಇಂಥ ಪದ್ಧತಿ ಸರಿಯಲ್ಲ. ಇಂಥ

ಪದ್ಧತಿಗಳನ್ನು ತಾವು ಕೈಬಿಡಬೇಕು. ಇನ್ನೂ ಸಾಕಷ್ಟು ವಿಚಾರಗಳಿವೆ, ಏತಕ್ಕೆಂದರೆ ಕೆ.ಇ.ಬಿ.ಗೆ ಹಣ ಕೊಟ್ಟಿರುವುದು ridiculous. It is irresponsible. ಈ ತರಹ ಹಣವನ್ನು ಕೊಡುತ್ತಾ ಹೋದರೆ ನೀವು ಖಂಡಿತವಾಗಿಯೂ ಕಷ್ಟದಲ್ಲಿ ಸಿಲುಕಿಕೊಳ್ಳುತ್ತೀರಿ; ಖಂಡಿತವಾಗಿಯೂ ತಾವು ರಾಜ್ಯದ ಬಜೆಟ್‌ನಲ್ಲಿ ತಾವೇನು ಕಮಿಟ್‌ಮಾಡಿಕೊಂಡಿದ್ದೀರಿ, ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಆಗುವುದಿಲ್ಲ. ಇರಿಗೇಷನ್‌ಗೆ ಹಣವನ್ನು ಕೊಡುವುದಕ್ಕಾಗುವುದಿಲ್ಲ, ನಿಮಗೆ ಪವರ್ ಪ್ರೊಡ್ಯೂಸ್ ಮಾಡಲಿಕ್ಕೂ ಆಗುವುದಿಲ್ಲ, ಡೆವಲಪ್‌ಮೆಂಟ್ಸ್‌ಗೂ ಹಣವನ್ನು ಕೊಡುವುದಕ್ಕಾಗುವುದಿಲ್ಲ; ನೀವು ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತೀರಿ. ಹಾಗಾಗಿ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುತ್ತೇನೆ. Financial discipline ಅನ್ನು ಎನ್‌ಫೋರ್ಸ್ ಮಾಡಿ ರೆವಿನ್ಯೂ ಎಕ್ಸ್‌ಪೆಂಡಿಚರ್ ಕಡಿಮೆ ಮಾಡಿ. ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಕಡಿಮೆ ಮಾಡಿ; ಹಾಗೆ ಮಾಡಿದರೆ ಮಾತ್ರ ನೀವು ಏನು ಹೇಳಿದ್ದೀರಿ ಆ ಗುರಿಯನ್ನು ಮುಟ್ಟಲಿಕ್ಕೆ ಸಾಧ್ಯವಾಗಬಹುದು. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರೇ, ತಾವು ಸಮಯಕೊಟ್ಟಿರಿ; ಅದಕ್ಕೆ ತಮಗೂ ನನ್ನ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) :- ಮಾನ್ಯ ಅಧ್ಯಕ್ಷರೇ 1992-93ನೇ ಸಾಲಿನ ಅಂತಿಮ ಕಂತಿನ ಪೂರಕ ಅಂದಾಜುಗಳನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ್ದಾರೆ. ಮಾನ್ಯವಿರೋಧಪಕ್ಷದ ನಾಯಕರು ಈಗಾಗಲೇ ಹೇಳಿದಹಾಗೆ ಈಗಾಗಲೇ ಪೂರಕ ಅಂದಾಜುಗಳ ಮೂರನೇ ಕಂತಿಗಿಂತ ಮೊದಲು 1992ನೇ ಇಸವಿಯ ಜುಲೈನಲ್ಲಿ 117 ಕೋಟಿ ರೂಪಾಯಿಗಳಿಗೆ ಮತ್ತು ಜನವರಿ 1993ರಲ್ಲಿ 131 ಕೋಟಿ ರೂಪಾಯಿಗಳ ಪೂರಕ ಅಂದಾಜುಗಳು ಏನಿತ್ತೋ, ಅದಕ್ಕೆ ಈಗಾಗಲೇ ಸಭೆ ಒಪ್ಪಿಗೆ ಕೊಟ್ಟಿದೆ. ಇವತ್ತಿನ ಈ ಪೂರಕ ಅಂದಾಜುಗಳ ಬಾಬ್ತು ಅಂದರೆ ಸುಮಾರು 40 ಬೇಡಿಕೆಗಳನ್ನು ಸದನದ ಒಪ್ಪಿಗೆಗಾಗಿ ಇಟ್ಟಿದ್ದಾರೆ. ಕನಿಷ್ಟ ಈ 40 ಬೇಡಿಕೆಗಳ ಬಾಬ್ತುಗಳ ಪೈಕಿ ಕನಿಷ್ಟ ಬೇಡಿಕೆಗಳ ಬಗ್ಗೆಯಾದರೂ ನಾನು ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಕನಿಷ್ಟ ಒಂದು ನಿಮಿಷವಾದರೂ ತಾವು ಅವಕಾಶ ಕೊಡುತ್ತೀರೆಂದು ನಾನು ಭಾವಿಸಿದ್ದೇನೆ. ಮೊದಲನೆಯದಾಗಿ ಒಂದನೆಯ ಬೇಡಿಕೆಯಲ್ಲಿ ವ್ಯವಸಾಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದು ಕೇಂದ್ರ ಪುರಸ್ಕೃತ ಯೋಜನೆ 1992ರಲ್ಲಿ ಈ ರಾಜ್ಯದಲ್ಲಿ ಜಾರಿಗೆ ಬಂದಿತ್ತು. ಆ ಹಣವನ್ನು ಆಗ ಖರ್ಚುಮಾಡಲಿಲ್ಲ. 1991-92ರಲ್ಲಿ 1992-93ರಲ್ಲಿ ನೀವು ಖರ್ಚುಮಾಡಿ ಎಂದು ಹೇಳಿದ್ದರು. ಖರ್ಚುಮಾಡಿ ಎಂದು ಹೇಳಿದ್ದು ಯಾವಾಗ ಸ್ವಾಮಿ? ಅದೇನು ಮೂರು ದಿನಗಳಾಯಿತೇ ಬಂದು? 1991-92ರಲ್ಲಿ ಯಾವ ಒಂದು ಕೇಂದ್ರ ಪುರಸ್ಕೃತ ಯೋಜನೆ ಜಾರಿಗೆ ಬಂದಿತ್ತೋ, ಏನು 207 ಲಕ್ಷ ರೂಪಾಯಿಗಳನ್ನು ಅವರು ಬಿಡುಗಡೆ ಮಾಡಿದ್ದರೋ ಆ ಹಣವನ್ನು ಖರ್ಚುಮಾಡಲಿಕ್ಕೆ ತಮ್ಮಿಂದ 1991-92ರಲ್ಲಿ ಆಗಲಿಲ್ಲ. ಹೋಗಲಿ, 1992-93ರಲ್ಲಿಯಾಗಲೀ ಕೇಂದ್ರ ಸರ್ಕಾರದ ಅನುಮತಿಯನ್ನು ತೆಗೆದುಕೊಂಡು ಖರ್ಚುಮಾಡಲಿಕ್ಕೂ ಆಗಲಿಲ್ಲ. 1992-93ರ ಕೊನೆಯದಿವಸ ಈ ಪೂರಕ ಅಂದಾಜುಗಳನ್ನು ತಂದಿದ್ದೀರಿ. ಅಂದರೆ ಈ ಹಣವನ್ನು ಖರ್ಚು ಮಾಡಲಿಕ್ಕೆ ನಿಮಗೆ ಶಕ್ತಿ ಇದೆಯೋ? ಅದಕ್ಕಿಂತ ಹೆಚ್ಚಾಗಿ ಇದು ಏತಕ್ಕೋಸ್ಕರ ಹೀಗಾಗುತ್ತದೆಂದರೆ ಸಂಬಂಧಪಟ್ಟ ಇಲಾಖೆಯವರು ಮುಂದೆ ಏನು ಕೆಲಸ ಮಾಡಬೇಕು, ಅನುಮತಿಯನ್ನು ಯಾವಾಗ ಪಡೆಯಬೇಕೆನ್ನುವ ದೂರದೃಷ್ಟಿತ್ವ ಇಲ್ಲದೆ ಅಥವಾ ತಮ್ಮ ಯೋಜನೆಗಳನ್ನು ಜಾರಿ ಮಾಡುವಾಗ ಯಾವುದರ ಬಗ್ಗೆ ಕಾಳಜಿಯನ್ನು ವಹಿಸಬೇಕು ಆ ಕಾಳಜಿಯನ್ನು ಸರ್ಕಾರ ವಹಿಸದಿರುವುದರಿಂದ ಇಂದು ಇಂಥ ಪರಿಸ್ಥಿತಿ ಉಂಟಾಗಿದೆ ಎಂದರೆ ತಪ್ಪಾಗಲಾರದು. ಅದಕ್ಕಿಂತ ಮತ್ತೊಂದು ಕೇಂದ್ರ ಪುರಸ್ಕೃತ ಯೋಜನೆಯನ್ನು ತಾವು ಜಾರಿಗೆ ತಂದು 100 ಜನರಿಗೆ ಸಬ್ಸಿಡಿ ಕೊಡುತ್ತೇವೆ; ಅದರಂತೆ ಇವತ್ತು ಟ್ರಾಕ್ಟರುಗಳನ್ನು ಕೊಡುತ್ತೇವೆ, ಅದರಂತೆ 30 ಲಕ್ಷರೂಪಾಯಿಗಳನ್ನು ಕೊಡುತ್ತೇವೆನ್ನುವ ಮಾತನ್ನು ಹೇಳಿದಿರಿ. ಸ್ವಾಮಿ, ಈ ಒಂದು ಕೇಂದ್ರ ಪುರಸ್ಕೃತ ಯೋಜನೆ ಏನಿದೆ ಕೃಷಿ ಯಾಂತ್ರಿಕ ಅಭಿವೃದ್ಧಿ ಯೋಜನೆ ಎಂದು ಏನು ಕರೆಯುತ್ತೇವೆ, ಇದಕ್ಕೆ ಹೆಚ್ಚು ಹಣವನ್ನು ಬಿಡುಗಡೆ ಮಾಡತಕ್ಕಂಥದ್ದು ಅತ್ಯಂತ ಅವಶ್ಯಕ. ಇದು ಕೇಂದ್ರ ಪುರಸ್ಕೃತ ಯೋಜನೆಯಾದ್ದರಿಂದ ಹೆಚ್ಚು ಹಣವನ್ನು ಪಡೆಯಲಿಕ್ಕೆ ತಾವು ಪ್ರಯತ್ನ ಮಾಡಬೇಕೆಂದು ಹೇಳಬಯಸುತ್ತೇನೆ.

ನಂತರ ತೋಟಗಾರಿಕೆ ಯೋಜನೆಯಲ್ಲಿ ಈ ಎರಡು ಕೋಟಿ ರೂಪಾಯಿಗಳನ್ನು ತಾವು ಡ್ರಿಪ್ ಇರಿಗೇಷನ್‌ಗೆ ಅಂದರೆ ಹನಿನೀರು ಯೋಜನೆಗೆ ಕೊಟ್ಟಿದ್ದೀರಿ ಎನ್ನುವ ಮಾತನ್ನು ಹೇಳಿದಿರಿ. ಇದಕ್ಕೆಹಣದ ಪೂರೈಕೆ ಅಂದಾಜುಗಳನ್ನು ಇಡಲಾಗಿದೆ ಎಂದು ತಾವು ಈಗಾಗಲೇ ಪ್ರಸ್ತಾಪ ಮಾಡಿದ್ದೀರಿ. ಅದಕ್ಕೆ ಕೇವಲ 50 ಲಕ್ಷ ರೂಪಾಯಿಗಳನ್ನು ಇಟ್ಟು ಕೇಂದ್ರ ಸರ್ಕಾರದಿಂದ ಇನ್ನು 50 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ ಎನ್ನುವ ಭಾವನೆಯಿಂದ ಒಂದು ಕೋಟಿ ರೂಪಾಯಿಗಳ ಬೇಡಿಕೆಗೆ ಸದನದ ಒಪ್ಪಿಗೆಯನ್ನು ತಗದುಕೊಂಡಿರಿ. ಇವತ್ತಿನ ದಿವಸ ನಾನು ಕೇಳುತ್ತೇನೆ. ಈ ಎರಡು ಕೋಟಿ ರೂಪಾಯಿಗಳನ್ನು ತಾವು ಏನು ಪಡೆದಿದ್ದೀರಿ, ಇದನ್ನು ಮೊದಲೇ ಏತಕ್ಕೆ ಪಡೆಯಲಿಕ್ಕೆ ಸಾಧ್ಯವಾಗಲಿಲ್ಲ. ಇವತ್ತು ಕೊನೆಯದಿವಸ ಇದನ್ನು ತಂದಿದ್ದೀರಿ. ಈ ಹಣವನ್ನು ಹೇಗೆ ಖರ್ಚುಮಾಡುತ್ತೀರಿ ಎನ್ನುವ ಬಗ್ಗೆ ನಮಗೆ ತಿಳುವಳಿಕೆಯನ್ನು ತಾವು ಕೊಡಬೇಕೆನ್ನುವ ಮಾತನ್ನು ಹೇಳಲು ಇಚ್ಛಿಪಡುತ್ತೇನೆ. ಮೂರನೆಯದಾಗಿ ತಾವು ಸಾರ್ವಜನಿಕ ಉದ್ಯಮ ವಲಯಗಳಿಗೆ ಬಡ್ಡಿಯನ್ನು ಕೊಟ್ಟಿದ್ದೀರಿ. ತೆರಿಗೆ ರಹಿತ ಸಾಲವಾಗಿ 140 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದರ ಬಾಬ್ತು ಸಹ ತಾವು ಖರೀದಿ ತೆರಿಗೆಯನ್ನು ಬಡ್ಡಿರಹಿತ ಸಾಲವಾಗಿ ಮಾರ್ಪಾಡು ಮಾಡುವುದಕ್ಕೆ ಮಾಡಿದ್ದರೆ ಯಾವ ಯಾವ ಕೈಗಾರಿಕೆಗಳಿಗೆ ಕೊಟ್ಟಿದ್ದೀರೆಂಬುದನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಅದಕ್ಕಿಂತ ಹೆಚ್ಚಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ರೇಷ್ಮೆ ಇಲಾಖೆಗೋಸ್ಕರ ತಾವು 29 ಹುದ್ದೆಗಳನ್ನು ಈಗಾಗಲೇ ನಿರ್ಮಾಣ ಮಾಡಿದ್ದೀರಿ. ತಾವು ಹೇಳುತ್ತಿದ್ದೀರಿ, ನಾನ್‌ಪ್ಲಾನ್ ಎಕ್ಸಪೆಂಡಿಚರ್ ಏನಿದೆ ಅದನ್ನು ಕಡಿಮೆ ಮಾಡುತ್ತೇವೆಂದು; ಮತ್ತು ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಅನ್ನು ಕಡಿಮೆ ಮಾಡುತ್ತೇವೆಂಬ ಮಾತನ್ನು ಹೇಳುತ್ತಿದ್ದೀರಿ. ಬಜೆಟ್ ಮಂಡನೆ ಮಾಡುವಂಥ ಕಾಲದಲ್ಲಿ ತಾವು ಹೇಳಿದಿರಿ ಈ ಸೇವಾ ವೆಚ್ಚ ವಿಪರೀತ ಜಾಸ್ತಿಯಾಗಿದೆ. ಶೇಕಡ 53ರಷ್ಟಾಗಿದೆ, ಇದನ್ನು ಕಡಿಮೆ ಮಾಡಬೇಕೆಂಬ ಮಾತನ್ನು ಹೇಳಿದಿರಿ. ಆದರೆ ಪುನಃ ತಾವು ಅದಕ್ಕೆ ವ್ಯತಿರಿಕ್ತವಾಗಿ 7 ಲಕ್ಷ ರೂಪಾಯಿಗಳನ್ನು ಹೊಸ ಹುದ್ದೆಗಳನ್ನು ನಿರ್ಮಾಣ ಮಾಡುವ ಮೂಲಕ ಖರ್ಚು ಮಾಡುತ್ತಿದ್ದೀರಿ. ಇನ್ನು ಐದನೇ ವಿಚಾರಕ್ಕೆ ಬಂದರೆ ಅದು ಬಹಳ ಅಪರೂಪ ಎಂದು ಭಾವಿಸಿದ್ದೇನೆ. ಏತಕ್ಕೆಂದರೆ ವಿಶ್ರಾಂತಿ ವೇತನ ಪಡೆಯುವುದರಲ್ಲಿ ವ್ಯತ್ಯಯವಾದುದರಿಂದ 32 ಕೋಟಿ ರೂಪಾಯಿ ಬೇಕೆಂಬ ಮಾತನ್ನು ಹೇಳಿದಿರಿ. ತಮ್ಮ ಆರ್ಥಿಕ ಇಲಾಖೆಯಾಗಲಿ, ಯಾವ ಆಡಳಿತ ಇಲಾಖೆಗಳಾಗಲಿ ಅವರಿಗೆ ತಮ್ಮಲ್ಲಿ ಎಷ್ಟು ಜನ ನೌಕರರು ಇದ್ದಾರೆಂದು ಲೆಕ್ಕ ಇಲ್ಲವೇ? ಮುಂದಿನ ವರ್ಷ ಎಷ್ಟು ಜನ ರಿಟೈರ್ ಆಗುತ್ತಾರೆಂದು ಅವರಿಗೆ ಅಂದಾಜು ಗೊತ್ತಾಗುವುದಿಲ್ಲವೇ? ನಿಖರವಾಗಿ ಗೊತ್ತಾಗುತ್ತದೆ. ಇದರ ಅರ್ಥ ಏನೆಂದರೆ ಆರ್ಥಿಕ ಶಿಸ್ತನ್ನು ತರುವಲ್ಲಿ ನಿಮ್ಮ ಇಲಾಖೆ ವಿಫಲವಾದುದರಿಂದ ಇಂಥ ಅಂದಾಜನ್ನು ಮಾಡುವುದಕ್ಕೆ ತಮಗೆ ಸಾಧ್ಯವಾಗಿಲ್ಲವೆಂದು ಭಾವಿಸಿದ್ದೇನೆ. 32 ಕೋಟಿ ರೂಪಾಯಿಗಳು ಹೆಚ್ಚಿಗೆ ಹಣ ಬೇಕೆಂದು ತಾವು ಏನು ಹೇಳಿದ್ದೀರಿ, ಇದು ಆರ್ಥಿಕ ಶಿಸ್ತನ್ನು ತರುವುದಕ್ಕೆ ಸಹಾಯವಾಗುವುದಿಲ್ಲ. ಸರಿಯಾದ ರೀತಿಯಲ್ಲಿ ಅಂದಾಜು ಮಾಡುವುದಕ್ಕೆ ತಾವು ವಿಫಲರಾಗಿದ್ದೀರೆಂಬುದನ್ನು ಇದು ತೋರಿಸುತ್ತದೆ. ಇದಕ್ಕಿಂತ ಹೆಚ್ಚಾಗಿ ಇನ್ನೊಂದು ಕೇಳಿದ್ದೀರಿ. ಅದೇನೆಂದರೆ, ನಾಲ್ಕೂವರೆ ಲಕ್ಷ ರೂಪಾಯಿ ಬಡ್ಡಿಗೋಸ್ಕರ ಕೇಳಿದ್ದೀರಿ. ಏತಕ್ಕೆ ಇದು? ನೀವು ನಿಮ್ಮ ನೌಕರರ ವಿರುದ್ಧವಾಗಿ ಸಕಾಲದಲ್ಲಿ ಅವರಿಗೆ ನಿವೃತ್ತಿ ವೇತನ ಕೊಡುವುದಕ್ಕೆ ಸಾಧ್ಯವಾದರೆ ಇವತ್ತಿನ ದಿವಸ ಅವರು ಕೋರ್ಟಿಗೆ ಹೋಗಿ ಬಡ್ಡಿ ಕೇಳುವ ಪರಿಸ್ಥಿತಿ ತಂದುಕೊಂಡು ನಾಲ್ಕೂವರೆ ಲಕ್ಷ ರೂಪಾಯಿ ಬಡ್ಡಿ ಕೊಡುತ್ತೀರೆಂದರೆ ಈ ಬಡ್ಡಿ ಹಣಕ್ಕೆ ಯಾರು ಜವಾಬ್ದಾರರು? ಯಾರು ಇದನ್ನು ಸರಿಯಾದ ರೀತಿಯಲ್ಲಿ ಪಾವತಿ ಮಾಡುವುದಕ್ಕೆ ವಿಫಲರಾಗಿದ್ದಾರಲ್ಲಿ ಮತ್ತು ನಿವೃತ್ತಿ ಆದ ತಕ್ಷಣ ಫ್ಲಿಕೊಡುವುದಕ್ಕೆ ಯಾರಿಂದ ಸಾಧ್ಯವಾಗಿಲ್ಲ ಅವರನ್ನು ಹೊಣೆಗಾರರನ್ನಾಗಿ ಮಾಡಬೇಕು ಮತ್ತು ಅವರಿಂದ ಈ ಹಣವನ್ನು ವಸೂಲ್ಮಾಡಬೇಕೇ ಹೊರತು ನಿವೃತ್ತಿಯಾದವರಿಗೆ ನಾವು ಹಣವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಬಡ್ಡಿ ಹಣವನ್ನು ಈ ಪೂರಕ ಅಂದಾಜಿನ ಮೂಲಕ ತಂದಿರುವುದು ಖಂಡಿತ ಸರಿಯಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಬಹಳ ಪ್ರಮುಖವಾದ ವಿಚಾರ. ಕೋಟಗಟ್ಟಲೆ ಹಣವನ್ನು ನೀರಾವರಿ ಕಂಟ್ರಾಕ್ಟರಿಗೆ ಮುಂಗಡವಾಗಿ ಕೊಟ್ಟಿದ್ದೀರಿ. ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ.

ಕಳೆದ 3 ದಿನಗಳಿಂದ ಈ ಪೂರಕ ಅಂದಾಜಿನ ಪಟ್ಟಿ ನನಗೆ ಸೇರಿದಾಕ್ಷಣ ಆವತ್ತಿನಿಂದ ಇವತ್ತಿನವರೆಗೆ ನಾನು ಸತತ ಪ್ರಯತ್ನ ಮಾಡುತ್ತಿದ್ದೇನೆ. ಈಕಡೆ ಮುಖ್ಯ ಮಂತ್ರಿಗಳು ಗಮನ ಕೊಡಬೇಕು. ಈ ರೀತಿ ಆಡಳಿತ ಮಾಡುವುದಕ್ಕೆ ಸಾಧ್ಯವಾಗುವುದಾದರೆ ಇಲ್ಲಿಯವರೆಗೆ ತಾವು ಹೇಳಿದಂಥ ಕಾನೂನು ಪಾಲನೆಯಾಗಲಿ, ಶಿಸ್ತಿನ ಪಾಲನೆಯಾಗಲಿ ಮಾಡುವುದಕ್ಕೆ ಸಾಧ್ಯವಿಲ್ಲ. 17 1/2 ಕೋಟಿ ರೂಪಾಯಿಗಳನ್ನು ತಾವು ಮುಂಗಡವಾಗಿ ಕೊಟ್ಟಿದ್ದೀರಿ ಯಾರಿಗೆ ಕೊಟ್ಟಿದ್ದೀರಿ? ಕಂಟ್ರಾಕ್ಟರಿಗೆ ಕೊಟ್ಟಿದ್ದೀರಿ. ಕಂಟ್ರಾಕ್ಟರಿಗೆ ಕೊಟ್ಟಿದ್ದು ಏತಕ್ಕೋಸ್ಕರ? ನಾನು ವಿರೋಧ ಪಕ್ಷದಲ್ಲಿ ಶಾಸಕನಾಗಿದ್ದೇನೆ; ನನ್ನ ಕರ್ತವ್ಯವನ್ನು ಮಾಡಬೇಕೆಂಬ ದೃಷ್ಟಿಯಿಂದ ನಾನು ವಿಧಾನ ಮಂಡಲದ ಕಾರ್ಯದರ್ಶಿಯವರಿಗೆ ಒಂದು ಪತ್ರ ಬರೆದು ಕೊಟ್ಟೆ. ಕಾರ್ಯದರ್ಶಿಯವರಿಗೆ, ದಯವಿಟ್ಟು ಸರ್ಕಾರಿ ಆದೇಶದ ಪ್ರತಿ ಕೊಡಿ ಎಂದು ಕೇಳಿದೆ. ಮಾನ್ಯ ಅಧ್ಯಕ್ಷರೇ, ತಾವು ನನ್ನ ರಕ್ಷಣೆಗೆ ಬರಬೇಕು. ಇದನ್ನು ಇಷ್ಟು ಲಘುವಾಗಿ ಬಿಡಲಿಕ್ಕೆ ಸಾಧ್ಯವಿಲ್ಲ. ಯಾವ ಚರ್ಚೆಯನ್ನು ನಾವು ಸಾರ್ಥಕವಾಗಿ ಮಾಡಬೇಕು, ಯಾವ ಆರೋಪಗಳನ್ನ ಮಾಡಬೇಕಾದರೆ ನಿಖರವಾಗಿ ತಿಳಿದುಕೊಂಡು ಮಾಡಬೇಕೆಂಬ ಅಭಿಲಾಷೆಯಿಂದ ಸರ್ಕಾರಿ ಆದೇಶದ ಪ್ರತಿಗಳನ್ನು ಕೇಳಿದರೆ ಸರ್ಕಾರದಲ್ಲಿ ಆದೇಶದ ಪ್ರತಿಗಳನ್ನ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕಿಂತ ನಾಚಿಕೆಗೇಡಿನ ಸಂಗತಿ ಬೇರೆ ಯಾವುದು ಇದೆ? ಏತಕ್ಕೋಸ್ಕರ ಪೂರಕ ಅಂದಾಜನ್ನು ನಮ್ಮ ಮುಂದುಡುತ್ತೀರಿ? ತಾವು ಹೇಳಬಹುದು, ನಮಗೆ 180 ಜನರ ಬೆಂಬಲ ಇದೆ, ನೀವು ಮಾತನಾಡಬೇಕಾದ ಅವಶ್ಯಕತೆ ಇಲ್ಲ. ನಮಗೆ ಇಷ್ಟಬಂದ ರೀತಿಯಲ್ಲಿ ನಮ್ಮ ಕೆಲಸ ಮಾಡುತ್ತೇವೆಂದರೆ ಅದಕ್ಕಿಂತ ಬೇರೆ ಅರ್ಥ ಕಲ್ಪಿಸಲಿಕ್ಕೆ ಸಾಧ್ಯವಿಲ್ಲ. ಈ ಮಾತನ್ನು ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೆ 17.5 ಲಕ್ಷ ರೂಪಾಯಿಗಳನ್ನು ಮೆ: ಆರ್. ಎನ್. ಶೆಟ್ಟಿ ಅಂಡ್ ಕಂಪನಿ, ಗಾಯಿತ್ರಿ ಇಂಜಿನಿಯರಿಂಗ್ ಕಂಪನಿ ಮತ್ತು ಬ್ರಹ್ಮದೇವ ನಾಯಕ ಕಂಪನಿಯವರಿಗೆ ಮುಂಗಡವಾಗಿ ಕೊಟ್ಟಿದ್ದೀರಿ.

ಏತಕ್ಕೋಸ್ಕರ ಕೊಟ್ಟಿರಿ? ಕಾಂಟ್ರಾಕ್ಟ್ ಪ್ರಕಾರ ಕೆಲಸ ಮಾಡುವುದಾದರೆ ಇದರ ಅವಶ್ಯಕತೆ ಇದೆ ಎಂಬುದನ್ನು ತಾವು ಪರಿಶೀಲಿಸುವುದಕ್ಕೆ ಪ್ರಯತ್ನ ಮಾಡಿದಾಗ ಅಥವಾ ಇವತ್ತಿನ ದಿವಸ ಮುಂಗಡವಾಗಿ ಏನು ಹಣ ಕೊಟ್ಟಿದ್ದೀರಿ ಅದನ್ನು ವರ್ಕ್‌ಡನ್ ಬಿಲ್‌ನಲ್ಲಿ ಮುರಿದುಕೊಂಡಿದ್ದೀರಾ ಎಂದರೆ ಇದಕ್ಕೆ ಸರ್ಕಾರದಲ್ಲಿ ಉತ್ತರವಿಲ್ಲ. ಆದುದರಿಂದ ನೇರವಾಗಿ ಮಂತ್ರಿಗಳನ್ನು ಕೇಳುತ್ತೇನೆ, ನಿಜವಾಗಿ ಇಲ್ಲಿಯವರೆಗೆ ಏನು ಭಾಷಣ ಮಾಡಿದಿರಿ, ಆ ಭಾಷಣದಲ್ಲಿ ಸ್ವಲ್ಪ ಭಾಗವಾದರೂ.....

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಇವತ್ತು ಮೂರು ಗಂಟೆಗೆ ಈ ವಿಧೇಯಕವನ್ನು ಪಾಸ್ ಮಾಡಿಕೊಡುತ್ತೇವೆಂದು ವಿರೋಧಪಕ್ಷದ ನಾಯಕರು ಎಲ್ಲಾ ರೀತಿಯ ಭರವಸೆ ಕೊಟ್ಟಿದ್ದರು. ಇದು ವಿಧಾನಪರಿಷತ್‌ಗೆ ಹೋಗಿ ಮಂಜೂರಿಯಾಗಬೇಕಾಗುತ್ತದೆ. ಆದ್ದರಿಂದ ಜಾಗ್ರತೆ ಮುಗಿಸಬೇಕೆಂದು ನಾನು ಆಫೀಲ್ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ:-ಏನು, ಹಾಗಾದರೆ ಟೀಕೆ ಮಾಡುವುದು ಬೇಡವೇ? 17 ಕೋಟಿ 50 ಲಕ್ಷ ರೂಪಾಯಿಗಳನ್ನು ತಾವೇನು ಕೊಟ್ಟಿದ್ದೀರಲ್ಲಾ ಅದಕ್ಕೆ ಸಂಬಂಧಪಟ್ಟ ಮಾಹಿತಿ ಕೊಡಿ ಎಂದರೆ ಮಾಹಿತಿ ಕೊಡಲಿಕ್ಕೆ ಅಸಮರ್ಥವಾದಂತಹ ಸರ್ಕಾರಕ್ಕೆ ಈ ದೇಶ ಹಾಗೂ ರಾಜ್ಯವನ್ನು ಆಳುವುದಕ್ಕೆ ಅರ್ಹತೆಯಿದೆಯೇ? ಇದಕ್ಕೆ ಉತ್ತರ ಹೇಳಿ; ಉಳಿದಿದ್ದು ಆಮೇಲೆ ಕೇಳೋಣ.

ಶ್ರೀ ಸಿ. ಬೈರೇಗೌಡ:- ಮಾನ್ಯ ಏಕಾಂತಯ್ಯನವರೇ, ಒಂದು ನಿಮಿಷ ಮಾನ್ಯ ಕಾನೂನು ಸಚಿವರು ಮೂರು ಗಂಟೆಗೆ ಪಾಸ್ ಮಾಡಿ ಕೊಡುತ್ತೇವೆಂದು ಹೇಳಿದ್ದೀರಿ ಎಂದರು. ಹೇಳಿದ್ದೆವು ಅದು ನಿಜ. ಒಂದು ಸರ್ಕಾರಿ ಆಜ್ಞೆ ಅದು ಪಬ್ಲಿಕ್ ಡಾಕ್ಯುಮೆಂಟ್, ದಾರಿಯಲ್ಲಿ ಹೋಗತಕ್ಕವನು ಕೂಡ ಸರಿಯಾದ ಫೀಸು ಕಟ್ಟಿದರೆ ಅದನ್ನು ಕೊಡಬೇಕೆಂದು ಕಾನೂನು ಇದೆ. ಅದರಲ್ಲೂ ಜವಾಬ್ದಾರಿ ಇರತಕ್ಕ ಶಾಸಕರು ಸರ್ಕಾರಿ ಆಜ್ಞೆ ಕೊಡಿ ಎಂದು ಕೇಳಿದರೆ ಅದನ್ನು ಕೊಡದಿರತಕ್ಕ ಪರಿಸ್ಥಿತಿ ಇದ್ದರೆ. ಅದಕ್ಕೇ ಏನು ಹೇಳಬೇಕು ಅದನ್ನು

ಹೇಳಹೇಳಬಾರದು ಇಲ್ಲಿ. ಸರ್ಕಾರಿ ಆಚ್ಛೆಯನ್ನು ಕೊಡದಿರುವುದಕ್ಕೆ ಕಾರಣವೇನು? ಏನೋ ವ್ಯವಹಾರ ಇದೆ. ಅದಕ್ಕೇ ಹೇಳುತ್ತಿದ್ದೇವೆ. ಸಮಯ ನಿಗದಿಪಡಿಸುವುದಕ್ಕೆ ಹೋಗಬೇಡಿಯೆಂದು;

ಶ್ರೀ ಹೆಚ್.ಏಕಾಂತಯ್ಯ:- ಈ ವಿಚಾರವನ್ನು ಇಲ್ಲಿಗೇ ಬಿಡುವುದಿಲ್ಲ. ಇದನ್ನು ಬೇರೆ ರೂಪದಲ್ಲಿ ತಂದು ಚರ್ಚೆ ಮಾಡುತ್ತೇನೆ. ಇದನ್ನು ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೆ ಇದಕ್ಕೆ ನೀವು ಸಹಾಯ ಮಾಡುವಂತಹ ಪರಿಸ್ಥಿತಿಯಲ್ಲಿ ಇಲ್ಲದಿದ್ದರೆ ಏನು ಉಪಯೋಗ? ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಸಾಧನೆಯ ಸಮಾವೇಶಕ್ಕೆ 129 ಲಕ್ಷ ರೂಗಳನ್ನು ಪ್ರಚಾರ ಮತ್ತು ಜಾಹಿರಾತಿಗಾಗಿ ಖರ್ಚು ಮಾಡಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಟೆಲಿಪ್ರಿಂಟರ್ಸ್ ಬಾಡಿಗೆಗೋಸ್ಕರ 30 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಹೀಗೆ ಖರ್ಚು ಮಾಡತಕ್ಕವರು ವೆಚ್ಚವನ್ನು ಕಡಿಮೆ ಮಾಡುತ್ತೇವೆಂದು ಹೇಳಿದರೆ ಎಷ್ಟರ ಮಟ್ಟಿಗೆ ಒಂದಕ್ಕೊಂದು ಸಮಂಜಸ ಎನ್ನುವ ಬಗ್ಗೆ ತಾವೇ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

37 ಕೋಟಿ ರೂಪಾಯಿಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಕೊಟ್ಟಿದ್ದಾರೆ. ಅದರ ಬಗ್ಗೆಕೆಎಸ್ಆರ್‌ಟಿಸಿ ವಿಷಯ ಬಂದಾಗ ನಾನು ಮಾತನಾಡುತ್ತೇನೆ. ಆಶ್ರಯ ಮೋಜನೆಗ 13 ಕೋಟಿ 87 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದು ಮುಖ್ಯವಾದ ಪ್ರಶ್ನೆ. ತಾವು ಸಹ ಇದನ್ನು ಪರಿಗಣಿಸುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. 23 ಕೋಟಿ 38 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕೊಟ್ಟ ಹಣಕ್ಕೆ ಇವತ್ತಿನ ದಿವಸ ಲೆಕ್ಕ ಕೊಡುವ ಪರಿಸ್ಥಿತಿಯಲ್ಲಿ ಇಲ್ಲ. ಅದರ ಜೊತೆಗೆ 13 ಕೋಟಿ 87 ಲಕ್ಷ ಪೂರಕ ಅಂದಾಜು ಬಾಬ್ತಿಗೆ ತಾವು ಬಂದಿದ್ದೀರಿ. 23 ಕೋಟಿ 38 ಲಕ್ಷ ರೂಪಾಯಿಗಳ ಬಗ್ಗೆ ತಮ್ಮನ್ನು ಕೇಳ ಬಯಸುತ್ತೇನೆ. 40 ಸಾವಿರ ಮನೆಗಳನ್ನು ಕಟ್ಟಬೇಕೆಂದು ಕರ್ನಾಟಕದ ಹೌಸಿಂಗ್ ಬೋರ್ಡಿಗೆ ಪಹಿಸಿಕೊಟ್ಟಿದ್ದಾರೆ ಇವತ್ತಿನ ದಿವೆಸ 40 ಸಾವಿರ ಮನೆಗಳನ್ನು ಕಟ್ಟುವ ಪರಿಸ್ಥಿತಿಯಲ್ಲಿ ಹೌಸಿಂಗ್ ಬೋರ್ಡ್‌ನವರು ಇದ್ದಾರೆಯೇ? ಅದು ದಿವಾಳಿಯಾಗಿದೆ. ಅವರ ಹತ್ತಿರ ಹಣವಿಲ್ಲ. 40 ಸಾವಿರ ಮನೆಗಳನ್ನು ಕಟ್ಟಬೇಕೆಂದು ತಾವು ನಿಗದಿ ಮಾಡಿದ್ದೀರಿ. ಅವರ ಹತ್ತಿರ ಹಣವಿಲ್ಲದೆ ಇರುವುದರಿಂದ ಕಂಟ್ರಾಕ್ಟರುಗಳಿಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ. ಅದನ್ನು ಅವರು ವಾಪಸ್ಸು ಕೊಡದಿರುವ ಪರಿಸ್ಥಿತಿಯಲ್ಲಿರುವುದರಿಂದ ಈ ಯೋಜನೆಗೆ ಸಂಬಂಧಪಟ್ಟ ಹಾಗೆ ಹೇಗೆ ಮನೆಗಳನ್ನು ಕಟ್ಟುತ್ತಾರೆ? 66 ಸಾವಿರ ಮನೆಗಳನ್ನು ಕಟ್ಟಲಿಕ್ಕೆ ನೀವು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೀರಿ.

ಉಪಾಧ್ಯಕ್ಷರು: ಜಾಗ್ರತೆ ಮುಗಿಸಿ.

ಶ್ರೀ ಜೆ. ಸಿ. ಮಧುಸ್ವಾಮಿ:-ಜಾಗ್ರತೆ ಮುಗಿಸಿ ಅಂದರೆ ಅರ್ಥವೇನು?

ಉಪಾಧ್ಯಕ್ಷರು:- ಅವರು ಮಾತನಾಡುತ್ತಿದ್ದಾರೆ. ತಾವು ಕುಳಿತುಕೊಳ್ಳಿ. ದಯಮಾಡಿ ನೀವು ಕುಳಿತುಕೊಳ್ಳಿ. ಅವರು ಈಲ್ಡ್ ಆಗಿಲ್ಲ, ಮಾತನಾಡುತ್ತಿದ್ದಾರೆ. ತಾವು ಕುಳಿತುಕೊಳ್ಳಿ.

ಶ್ರೀ ಹೆಚ್. ಏಕಾಂತಯ್ಯ:-66 ಸಾವಿರ ಮನೆಗಳನ್ನು ಜಿಲ್ಲಾಧಿಕಾರಿಗಳ ಮುಖಾಂತರ ಜೂನ್ 30ರೊಳಗೆ ಕಟ್ಟಲಿಕ್ಕೆ ಪ್ರಯತ್ನ ಮಾಡುತ್ತೀರಿ. ಅದನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲ. ನಿಮ್ಮ ನೀತಿಯಲ್ಲಿ ಇವತ್ತಿನ ದಿವಸ ಬದಲಾವಣೆಯಾಗಬೇಕು. ಹೊಸ ಕಂಟ್ರಾಕ್ಟರುಗಳನ್ನು ಹುಡುಕಬೇಕು. ಅದಕ್ಕೆ ಬೇಕಾದ ಗೈಡ್‌ಲೈನ್ಸ್ ಸರ್ಕಾರ ಕೊಡಬೇಕು. ಅದು ಯಾವುದೂ ಆಗದಂತಹ ಕೆಲಸ. 1 ಲಕ್ಷದ 6 ಸಾವಿರ ಮನೆಗಳನ್ನು ಜೂನ್ 30 ರೊಳಗೆ ಕಟ್ಟುತ್ತೇವೆ ಎನ್ನವ ಮಾತನ್ನು ಹೇಳಿದ್ದಾರೆ, ಅದುಷ್ಟೆ ಖಂಡಿತವಾಗಿಯೂ ಮಾಡಲಿಕ್ಕೆ ಸಾಧ್ಯವಾಗದಿರತಕ್ಕ ಕೆಲಸ. ಅದಕ್ಕೆ ಬದಲಾಗಿ ಇವತ್ತಿನ ದಿವಸ ಫಲಾನುಭವಿಗಳು ಏನಿದ್ದಾರೆ ಆ ಫಲಾನುಭವಿಗಳಿಗೆ ಹಣವನ್ನು ಕೊಡುವುದರ ಮುಖಾಂತರ ಆ ಮನೆಯನ್ನು ಜಾಗ್ರತೆ ಕಟ್ಟಲಿಕ್ಕೆ ತಾವು ಪ್ರಯತ್ನ ಮಾಡಬೇಕು. ಅದೇ ರೀತಿಯಾಗಿ ಇವತ್ತಿನ ದಿವಸ ಭೂ ಸ್ವಾಧೀನ ಅರ್ಬಿಟ್ರೇಷನ್ ಕೇಸಸ್‌ಗೆ ತಾವು 269 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ನಾನು ಆಗಲೇ ಹೇಳಿದ್ದೇನೆ. ಸಣ್ಣ ಕೆರೆಗಳ ನೀರಾವರಿ ಯೋಜನೆಗಳು ಇವೆ. ವಿಶ್ವಬ್ಯಾಂಕಿನ ನೆರವಿನಿಂದ ತಾವು ಮಾಡುತ್ತಾ ಇದ್ದೀರಿ. ಏನು ತಪ್ಪಾಗಿದೆ ?

ಏತಕ್ಕೋಸ್ಕರ ಅರ್ಬಿಟ್ರೇಷನ್ ಫೀಸು ಸುಮಾರು 269 ಲಕ್ಷ ರೂಪಾಯಿಗಳನ್ನು ಸಂಬಂಧಪಟ್ಟ ಕಂಟ್ರಾಕ್ಟರುಗಳಿಗೆ ಕೊಡುತ್ತೀರಿ? ಅದರ ಬಗ್ಗೆ ತಾವು ವಿಚಾರ ಮಾಡಬೇಕು. ನಾನು ಈಗಾಗಲೇ ಹೇಳಿದ್ದೇನೆ. ಆರ್ಬಿಟ್ರೇಷನ್ ಕೇಸ್ ಹಾಕಲಿಕ್ಕೆ ಮುಖ್ಯವಾದ ಕಾರಣ ನಿಮ್ಮ ಇಲಾಖೆಯ ಅಧಿಕಾರಿಗಳು. ಅವರು ಗುತ್ತಿಗೆದಾರರ ಪರವಾಗಿ ಈ ಕೆಲಸ ಮಾಡಿ ಅವರಿಗೆ ಬೇಕಾದ ರೀತಿಯಲ್ಲಿ ಕಾನೂನು ಸೃಷ್ಟಿ ಮಾಡಿ ಕೊಡುವುದರಿಂದ ಇವತ್ತಿನ ದಿವಸ ಇಂತಹ ಅನಾಹುತ ಆಗುತ್ತಾ ಇದೆ. 269 ಲಕ್ಷ ರೂಪಾಯಿಗಳನ್ನು ಆರ್ಬಿಟ್ರೇಷನ್‌ಗೆ ಕೇಳಿದ್ದಾರೆ. ಇದು ಸಹ ಸರಿಯಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ನಾವು ವೆಚ್ಚವನ್ನು ಕಡಿಮೆ ಮಾಡಬೇಕು ಎನ್ನುವ ಮಾತನ್ನು ಹೇಳುತ್ತಾರೆ. ತಾವು ನೋಡಬೇಕು, ರಾಜ್ಯದ ವಿಧಾನ ಮಂಡಲಕ್ಕೆ ಸಂಬಂಧಪಟ್ಟ ಹಾಗೆ ಮತ್ತು ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗಕ್ಕೆ ಸಂಬಂಧಪಟ್ಟಂಥ ಬೇಡಿಕೆಯಲ್ಲಿ ಹೆಚ್ಚಿಗೆ ಹಣ ಖರ್ಚು ಮಾಡಿದ್ದೀರಿ. ಸುಮಾರು 24 ಲಕ್ಷ ರೂಪಾಯಿಗಳನ್ನು ಶಾಸಕರಭವನದಲ್ಲಿರತಕ್ಕಂಥ ಕಾರುಗಳಿಗೆ ಖರ್ಚು ಮಾಡಿದ್ದೀರಿ. ಯಾರಿಗೆ ಕೊಟ್ಟಿರಿ ಸ್ವಾಮಿ, ಕಾರುಗಳನ್ನು? ಇದಕ್ಕಿಂತ ಹೆಚ್ಚಾಗಿ ಮಂತ್ರಿಗಳಿಗೋಸ್ಕರ ಎಷ್ಟು ಹಣ ಖರ್ಚು ಮಾಡಿದ್ದೀರಿ ? 5 ಕೋಟಿ 32 ಲಕ್ಷ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಿದ್ದೀರಿ. ಇದರ ಜೊತೆಯಲ್ಲಿ ಈ ಸಾರಿ 83 ಲಕ್ಷ ರೂಪಾಯಿಗಳನ್ನು ಬೇಡಿಕೆ ಸಂಖ್ಯೆ 38ರಲ್ಲಿ ಸೇರಿಸಿದ್ದೀರಿ. ಇದೇ ರೀತಿಯಾಗಿ 47 ಲಕ್ಷ ರೂಪಾಯಿಗಳನ್ನು ಈಗಾಗಲೇ ಬೇಡಿಕೆ 36ರಲ್ಲಿ ಮಂತ್ರಿಮಂಡಲ ವಿಸ್ತರಣೆಯಿಂದ, ಪೆಟ್ರೋಲ್ ಬೆಲೆ ಏರಿಕೆ, ದೂರವಾಣಿ ಏರಿಕೆಯಿಂದ ಹೆಚ್ಚಾಗಿದೆ ಎಂದು ಇಷ್ಟು ಹಣವನ್ನು ಪಡೆಯುತ್ತಿದ್ದೀರಿ. ಇದಕ್ಕಿಂತ ಹೆಚ್ಚಾಗಿ ಬೇಡಿಕೆ 38ರಲ್ಲಿ ಸುಮಾರು 83 ಲಕ್ಷ ರೂಪಾಯಿಗಳನ್ನು ಪಡೆಯುತ್ತಿದ್ದೀರಿ, ಮಂತ್ರಿಮಂಡಲದ ಬಳಕೆಗೆ ಕಾರುಗಳನ್ನು ಕೊಂಡಿದ್ದರಿಂದ ಇವತ್ತಿನ ದಿವಸ ತಾವು ಸುಮಾರು 153 ಲಕ್ಷ ರೂಪಾಯಿಗಳನ್ನು ಪಡೆಯುತ್ತಿದ್ದೀರಿ. ಈ ರೀತಿಯಾಗಿ ದುಂದುವೆಚ್ಚ ಮಾಡುತ್ತಿದ್ದೀರಿ ಎಂದು ಹೇಳಿದರೆ ತಪ್ಪಾಗಲಾರದು. ಈ ಎಲ್ಲಾ ವೆಚ್ಚಗಳನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕಿತ್ತು. ಮತ್ತು ಜಿಲ್ಲಾ ಆಡಳಿತದಲ್ಲಿ ಸೇವಾವೆಚ್ಚವೆಂದು ಹೇಳಿ, ಸಿಬ್ಬಂದಿ ವೆಚ್ಚವೆಂದು ಹೇಳಿ ಏನು ನಿಗದಿ ಆಗಿದೆ, ಅದಕ್ಕಿಂತ ಹೆಚ್ಚಿಗೆ ಹಣವನ್ನು ಕೇಳುವಂಥ ಪೂರಕ ಅಂದಾಜನ್ನು ಇಟ್ಟಿದ್ದೀರಿ. ಕೊನೆಯದಾಗಿ ಎರಡು ವಿಚಾರಗಳನ್ನು ಮಾತ್ರ ನಾನು ಪ್ರಸ್ತಾಪ ಮಾಡುತ್ತೇನೆ. ತಾವು ಜಿಲ್ಲಾ ರಸ್ತೆಗಳಿಗೆ ಮತ್ತು ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು ರಸ್ತೆಗಳ ಅಭಿವೃದ್ಧಿಗೆ ಮೂರು ಕೋಟಿ ರೂಪಾಯಿಗಳನ್ನು ಕೇಳಿದ್ದೀರಿ. ಒಟ್ಟು 11 ಕೋಟಿ 73 ಲಕ್ಷ ರೂಪಾಯಿಗಳನ್ನು ಕೇಳಿದ್ದೀರಿ. ಇವತ್ತಿನ ದಿವಸ ಯಾವ್ಯಾವ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟೆಷ್ಟು ಕೆಲಸ ಆಗಿದೆಯೆಂಬುದನ್ನು ತಾವು ಹೇಳಿ ನಾವು ಏನು ಬರೆದು ಕೊಟ್ಟಿದ್ದೆವು ಆ ಕೆಲಸ ಮತ್ತು, ಕಾಮಗಾರಿಗಳು ಯಾವ್ಯಾವುದು ಇವೆ, ಅದಕ್ಕೆ ತಾವು ಹೇಳಿದಂಥ 12 ಲಕ್ಷ ರೂಪಾಯಿಗಳು ಸಹಾಯಧನದಿಂದ ಆಗಿದೆಯೋ ಅಥವಾ ಬೇರೆ ರೀತಿಯಿಂದ ಆಗಿದೆಯೋ ಎಂದು ನಮಗೆ ಗೊತ್ತಾಗಲಿಲ್ಲ. ಇದರ ಬಗ್ಗೆ ವಿವರಗಳನ್ನು ಕೊಡಬೇಕು. ಎಲ್ಲಕ್ಕಿಂತ ಹೆಚ್ಚಾಗಿ 113 ಕೋಟಿ ರೂಪಾಯಿಗಳನ್ನು ಕೆ.ಇ.ಬಿ. ಗೆ ಕೊಡಬೇಕೆಂದು ಮಾಡಿದ್ದೀರಿ. ಇದು ಅತ್ಯಂತ ಕೆಟ್ಟ ಕೆಲಸ ಎಂದು ನನಗೆ ಅನ್ನಿಸುತ್ತದೆ. ಯಾವ ಒಂದು ಮಂಡಳಿ ಅಥವಾ ಸಂಸ್ಥೆ ತನ್ನ ನಡವಳಿಕೆಯಿಂದ ಲಾಭ ಮಾಡಬೇಕಿತ್ತು, ಆ ಲಾಭವನ್ನು ಮಾಡುವುದಕ್ಕೆ ಅದು ವಿಫಲವಾದಾಗ ಮತ್ತು ಆಡಳಿತ ಏನಿದೆ ಅದು ಸಂಪೂರ್ಣವಾಗಿ ಶಿಥಿಲವಾದಾಗ, ಭ್ರಷ್ಟಾಚಾರದಿಂದ ಕೂಡಿದಾಗ, ಕೇವಲ ಸರ್ಕಾರದಿಂದ ಹಣ ಕೊಡುವುದರ ಮೂಲಕ ಇಂತಹ ಸಂಸ್ಥೆಗಳನ್ನು ಸರಿ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಬದಲಾಗಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇವತ್ತಿನ ದಿವಸ ಇಂತಹ ಸಂಸ್ಥೆಗಳನ್ನು ವಿಚಾರಣೆ ಮಾಡುವುದರ ಮೂಲಕ ಮತ್ತು ಈ ಸಂಸ್ಥೆಗಳ ಆಡಳಿತವನ್ನು ಪುನರ್‌ವ್ಯವಸ್ಥೆ ಮಾಡುವುದರ ಮೂಲಕ ತಾವು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತಾಗಿ ಕೇವಲ 113 ಕೋಟಿ ರೂಪಾಯಿಗಳನ್ನು ಹೀಗೆ ಕೊಡುವುದು ಸರಿಯಲ್ಲವೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಕೊನೆಯದಾಗಿ, ಜೀತಮುಕ್ತರಿಗಾಗಿ 54 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದೀರಿ. ಇದು ಎಷ್ಟರ ಮಟ್ಟಿಗೆ ಸರಿ ಎಂದು ನಾನು ಕೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈ ಕಡೆ ಗಮನ ಕೊಡಬೇಕು.

ಕೇವಲ ಶಿವಮೊಗ್ಗ ಜಿಲ್ಲೆಯಲ್ಲಿ ಮಾತ್ರ ಜೀತವಿಮುಕ್ತರಿದ್ದಾರೆಯೇ? 54 ಲಕ್ಷ ರೂಪಾಯಿಗಳನ್ನು ಗ್ರಾಮೀಣ ಮತ್ತು ಉದ್ಯೋಗ - ಬೇಡಿಕೆ 56ರಲ್ಲಿ ಕೇಳಿದ್ದೀರಿ. ಇದು ಯಾರಿಗೆ ಸ್ವಾಮಿ? ಶಿವಮೊಗ್ಗ ಜಿಲ್ಲೆಯಲ್ಲಿ ಜೀತಮುಕ್ತರಿಗೆ ಪುನರ್‌ವಸತಿ ಕಲ್ಪಿಸಲು 54 ಲಕ್ಷ ರೂಪಾಯಿಗಳ ಅಗತ್ಯ ಇದೆಯೇ? ಕೊಡಿ, ಬೇಡವೆಂದು ನಾನು ಹೇಳುವುದಿಲ್ಲ. ಕೇವಲ ಒಂದು ಯೋಜನೆಯನ್ನು ಶಿವಮೊಗ್ಗ ಜಿಲ್ಲೆಗೋಸ್ಕರ ತಂದ್ದಿದ್ದೀರಾ ಅಥವಾ ಎಲ್ಲಾ ಜೀತ ವಿಮುಕ್ತರಿಗಾಗಿ ಇಂತಹ ಒಂದು ಯೋಜನೆಯನ್ನು ತಾವು ಸಿದ್ದ ಮಾಡಿದ್ದೀರಾ ಎಂಬುದನ್ನು ತಾವು ತಿಳಿಸಬೇಕು. ಇವತ್ತಿನ ದಿವಸ ನಾನು ಒಂದೇ ಒಂದು ಮಾತನ್ನು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳಲ್ಲಿ ಕೇಳಬಯಸುತ್ತೇನೆ. ತಾವು ಹೇಳಿದಿರಿ, ಎಲ್ಲಾ ಅಧಿಕಾರಿಗಳು ಹೂಣಗಾರಿಯಿಂದ ಅಧಿಕಾರ ಚಲಾವಣೆ ಮಾಡಬೇಕು ಮತ್ತು ಏನಾದರೂ ತಪ್ಪಿದ್ದರೆ ಅವರನ್ನು ಶಿಕ್ಷಿಸುತ್ತೇವೆ ಎಂದು; ನಮಗೆ ಏನೂ ಉಪಕಾರ ಮಾಡಬೇಡಿ. ನಾವು ನಿಮಗೆ ಸಹಾಯ ಮಾಡುತ್ತೇವೆ. ಇವತ್ತಿನ ದಿವಸ ಯಾರ ಮೇಲಾದರೂ ತಾಂತ್ರಿಕ ಕಾರಣದಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳದೇ ಇರತಕ್ಕಂಥ ಪರಿಸ್ಥಿತಿ ಉಂಟಾಗಿರಬಹುದು. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಒಂದು ಮಾದರಿಯಾದ ಕಾನೂನನ್ನು ತನ್ನಿ. ಇವತ್ತಿನ ದಿವಸ ಯಾವ್ಯಾವ ಭ್ರಷ್ಟ ಅಧಿಕಾರಿಗಳ ಬಗ್ಗೆ ಕೇಸ್ ಮಾಡುವುದಾದರೆ, ಅಥವಾ ಭ್ರಷ್ಟ ರಾಜಕಾರಣಿಗಳ ಬಗ್ಗೆ ಕೇಸ್ ಹಾಕುವುದಾದರೆ ತಮಗೆ ಗವರ್ನರ್ ಅವರ ಪೂರ್ವಾನುಮತಿ ಬೇಕು. ಸಂಬಂಧಪಟ್ಟ ಪ್ರಾಧಿಕಾರ ಏನಿದೆ, ಅದರ ಪೂರ್ವಾನುಮತಿ ಬೇಕು. ನಮಗೆ ಇಷ್ಟು ಸಹಾಯ ಮಾಡಿ. ಮುಖ್ಯಮಂತ್ರಿಗಳು ನಿಜವಾಗಿಯೂ ಭ್ರಷ್ಟಾಚಾರ ರಹಿತವಾದ ವ್ಯವಸ್ಥೆಯನ್ನು, ರಾಜ್ಯದಲ್ಲಿ ಅಂತಹ ಆಡಳಿತವನ್ನು ತರಬೇಕೆಂದು ಇಚ್ಛೆಯನ್ನು ಹೊಂದಿದ್ದರೆ, ಈ ಭ್ರಷ್ಟ ಅಧಿಕಾರಿಗಳ ವಿರುದ್ಧ, ಭ್ರಷ್ಟ ರಾಜಕಾರಣಿಗಳ ವಿರುದ್ಧ ಇತರ ನಾಗರೀಕರು ಏನಿದ್ದಾರೆ, ಕಳಕಳಿ ಇರತಕ್ಕಂಥ ಜನ ಏನಿದ್ದಾರೆ ಅವರಿಗೆ ಅನುಮತಿಯನ್ನು ಕೊಡಿ. ಅವರನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ ಅನುಮತಿ ಕೊಡಿ; ಬೇಕಾದಂಥ ಅಂಕಿ ಅಂಶಗಳನ್ನು ಪಡೆಯುವುದಕ್ಕೆ, ದಾಖಲೆಗಳನ್ನು ನೋಡುವುದಕ್ಕೆ, ಪರಿಶೀಲಿಸುವುದಕ್ಕೆ ಅವರಿಗೆ ಅಧಿಕಾರವನ್ನು ಕೊಡಿ. ಖಂಡಿತವಾಗಿಯೂ ಇದರಿಂದ ದೇಶದಲ್ಲಿ ಒಳ್ಳೆಯ ಆಡಳಿತ ವ್ಯವಸ್ಥೆಯನ್ನು ತರುವುದಕ್ಕೆ ಸಾಧ್ಯವಾಗುತ್ತದೆ. ಈ ಕೆಲಸವನ್ನು ತಾವು ಮಾಡುತ್ತೀರಿ ಎಂದು ತಿಳಿದುಕೊಂಡು ಇವತ್ತಿನ ದಿವಸ ನಾನು ಈ ಪೂರಕ ಅಂದಾಜನ್ನು ವಿರೋಧ ಮಾಡಿ ನನ್ನ ಮಾತುಗಳನ್ನು ಪೂರ್ಯಸುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ತಮ್ಮ ಸಮ್ಮುಖದಲ್ಲಿ ಈ ವಿಧೇಯಕವನ್ನು ಮೂರುವರೆ ಗಂಟೆಗೆ ಪಾಸ್ ಮಾಡಿಕೊಡುತ್ತೇವೆಂದು, ಎಲ್ಲರೂ ಒಪ್ಪಿಕೊಂಡಿದ್ದಾರೆ. ಈಗಾಗಲೇ ಐದೂವರೆ ಗಂಟೆಯಾಗಿದೆ. ಇದು ಇನ್ನು ವಿಧಾನ ಪರಿಷತ್ತಿಗೆ ಹೋಗಿ ಅಲ್ಲಿ ಒಪ್ಪಿಗೆ ಪಡೆಯಬೇಕು. ಮಾನ್ಯ ಬೈರೇಗೌಡರು ಹೇಳಿದ ಹಾಗೆ, ಪ್ರತಿಯೊಬ್ಬರಿಗೂ ಮಾತನಾಡುವ ಹಕ್ಕು ಇದೆ. ಕೇಳುವ ಹಕ್ಕು ಇದೆ. ಅದಕ್ಕೆ, ನಾವು ಉತ್ತರ ಕೊಡಬೇಕಾದ ಕರ್ತವ್ಯವೂ ಇದೆ. ಆದರೆ, ಕಾಲದ ಪರಿಮಿತಿಯಿಂದ, ದಯಮಾಡಿ ಮಾನ್ಯ ಸದಸ್ಯರ ಸಹಕಾರದೊಡನೆ, ತಾವು ಬೇಗ ಅದನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್ ಸಿಂಧ್ಯ ಕನಕಪುರ):- ಮಾನ್ಯ ಅಧ್ಯಕ್ಷರೇ, ಪೂರಕ ಅಂದಾಜುಗಳನ್ನು ಎಲ್ಲ ಸರ್ಕಾರಗಳೂ ಸಹಿತ ತೆಗೆದುಕೊಂಡು ಬರುತ್ತವೆ. ಇದೇನೂ ಹೊಸದಲ್ಲ. ಈ ವರ್ಷ ಮುಖ್ಯಮಂತ್ರಿಗಳು ಬದಲಾವಣೆಯಾಗಿದ್ದರಿಂದ, ಮೂರು ಸಾರಿ ತೆಗೆದುಕೊಂಡು ಬಂದಿದ್ದಾರೆ. ಆದರೆ, ನಾವು ಈ ಸರ್ಕಾರದಿಂದ ಫೈನಾನ್‌ಷಿಯಲ್ ಡಿಸಿಪ್ಲೀನನ್ನು ಎಕ್ಸ್‌ಪೆಕ್ಟ್ ಮಾಡಿದ್ದೆವು. ನಮಗೆ ಬಹಳ ನಿರಾಸೆಯಾಗಿದೆ. ಮಾನ್ಯ ಪೊಯ್ಲಿಯವರು ಏನು ಕರ್ಟೈನ್‌ಮೆಂಟ್ ಮಾಡಬೇಕೋ ಅದನ್ನು ಮಾಡುವುದಕ್ಕಾಗುತ್ತಾ ಇಲ್ಲ. ಮಂತ್ರಿಮಂಡಲವನ್ನು ದೊಡ್ಡದು ಮಾಡಿಕೊಂಡರು, ಅದಕ್ಕೆ ಒಂದೂವರೆ ಕೋಟಿ ಖರ್ಚು ಮಾಡಿಕೊಂಡಿದ್ದಾರೆ. ಹೆಲಿಕಾಪ್ಟರಿನಲ್ಲಿ ಓಡಾಡಲು ಅವರಿಗೆ ಬಹಳ ಉತ್ಸಾಹ, ಎಲ್ಲಾ ಕಡೆ ಹೋಗಬೇಕೆಂದು ಆಸೆ ಇದೆ. ಅದಕ್ಕೆ ಫ್ಯೂಯಲ್‌ಗಾಗಿ 80 ಲಕ್ಷ ಖರ್ಚುಮಾಡಿಕೊಂಡಿದ್ದಾರೆ. ಇದರ ಬಗ್ಗೆ ನಾವು ಅಪ್ರಿಷಿಯೇಟ್ ಮಾಡುತ್ತಾ

ಇದ್ದೆವು; ಯಾವಾಗ ಎಂದರೆ, ಮಾನ್ಯ ಮೊಯ್ಲಿ ಅವರು 2-3 ವಿಚಾರಗಳ ಕಡೆ ಗಮನಕೊಟ್ಟಿದ್ದರೆ; ನಾನು ಬಜೆಟ್ ಸಂದರ್ಭದಲ್ಲಿ ಹೇಳಬೇಕೆಂದಿದ್ದೆ, ಆದರೆ ಸಮಯದ ಅಭಾವದಿಂದ ಹೇಳುವುದಕ್ಕಾಗಲಿಲ್ಲ. ಇದರ ಬಗ್ಗೆ ವಿಚಾರ ಮಾಡಿ, ಪೂರಕ ಅಂದಾಜುಗಳಲ್ಲಿ ಖರ್ಚು ಮಾಡಿದ್ದರೆ, ಅದನ್ನು ಸ್ವಾಗತ ಮಾಡುತ್ತಿದ್ದೆ. ಹಳ್ಳಿಗಳಲ್ಲಿ ಬಡವರ ಹುಲ್ಲಿನ ಮೆದೆಗಳು ಬೆಂದುಹೋಗುತ್ತವೆ. ಇದಕ್ಕೆ, ನಿಮ್ಮ ಕಡೆಯಲ್ಲಿ ಏನು ಹೇಳುತ್ತೀರೋ ಗೊತ್ತಿಲ್ಲ; ಬಹುಶಃ ಬಣವೆ ಎಂದು ಹೇಳಬಹುದು. ಇದಕ್ಕೆ ಐದುನೂರು ರೂಪಾಯಿ ಪರಿಹಾರ ಕೊಡುತ್ತಾರೆ, ಇದು ಯಾವುದಕ್ಕೂ ಸಾಕಾಗುವುದಿಲ್ಲ. ದಯಮಾಡಿ ಇದರ ಬಗ್ಗೆ ತಾವು ಪುನರ್ ಪರಿಶೀಲನೆ ಮಾಡಬೇಕು. ಆಮೇಲೆ, ಹಾವು ಕಚ್ಚಿ ಸತ್ತವರ ಕುಟುಂಬಗಳಿಗೆ ಒಂದು ಸಾವಿರ ಕೊಡುತ್ತಾರೆ, ಅದು ಆಶಾಕಿರಣ ಎಂದು ಹೇಳಿ. ಅವರ ತಂದೆ ತಾಯಿಗಳೋ ಅಥವಾ ಮಕ್ಕಳೋ ಹೋಗಿ, ಅಸಿಸ್ಟೆಂಟ್ ಕಮಿಷನರ್ ಕಚೇರಿಗೆ ಅಲೆದಾಟ ಮಾಡಿಕೊಂಡು ಬಂದಾಗ, ಕೊನೇ ಪಕ್ಷ ಎರಡು ವರ್ಷವಾದ ಮೇಲೆ ಒಂದು ಸಾವಿರ ರೂಪಾಯಿ ಕೊಡುತ್ತಾರೆ. ಮತ್ತೆ ಗುಡಿಸಲುಗಳು ಸುಟ್ಟಾಗ ಐದುನೂರು ರೂಪಾಯಿ ಕೊಡುತ್ತಾರೆ. ಆಮೇಲೆ ಕರಡಿ ಕಚ್ಚಿದಾಗ, ಆನೆ ತುಳಿತಕ್ಕೆ ಸಿಕ್ಕಿದಾಗ 500 ರೂಪಾಯಿ ಕೊಡುತ್ತಿದ್ದಾರೆ. ಬಹುಶಃ ಇದು 500 ರೂಪಾಯಿಯಿಂದ 1,000 ರೂಪಾಯಿ ಇದ್ದರೆ ಜಾಸ್ತಿ. ಇಂತಾದ್ದು ಬೇಕಾದಷ್ಟು ಉದಾಹರಣೆಗಳು ಸಿಗುತ್ತವೆ. ಇಂತಹ ಖರ್ಚುಗಳನ್ನು ಈ ಪೂರಕ ಅಂದಾಜುಗಳಲ್ಲಿ ತೆಗೆದುಕೊಂಡು ಬಂದಿದ್ದರೆ, ಈ ಸದನದ ಎಲ್ಲಾ ಸದಸ್ಯರೂ ಸ್ವಾಗತ ಮಾಡುತ್ತಿದ್ದರು. ಆ ತರಹದ ವಿಚಾರಗಳು ಏನೂ ಇದರಲ್ಲಿ ಇಲ್ಲ. ನಿಮಗೆ ಹೇಳಬೇಕೆಂದರೆ, ನೀವು ಒಂದು ಸಂಸ್ಥೆಗೆ ಸಾಲ ಕೊಟ್ಟಿದ್ದೀರಿ. ಯಾವ ಕಾರಣದಿಂದ ಈ ಸಾಲ ಕೊಟ್ಟಿದ್ದೀರೋ ನನಗಂತೂ ಗೊತ್ತಿಲ್ಲ. ಈ ಟಾಟಾ ಬಾಂಬೆ ಮೊರಾರ್ಜಿ ಟಾಟಾರವರು ಉನ್ನತ ಅಧ್ಯಯನಕ್ಕಾಗಿ, ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆಯನ್ನು, ಏನು ಪ್ರಾರಂಭ ಮಾಡುತ್ತಿದ್ದಾರೆ. ಅವರಿಗೆ ಒಂದೂವರೆ ಕೋಟಿ ರೂಪಾಯಿಗಳನ್ನು ಬಡ್ಡಿ ರಹಿತ ಸಾಲವನ್ನು ಹೆಚ್ಚು ಕಂತುಗಳಲ್ಲಿ ಕೊಡುತ್ತಿದ್ದೀರಿ. ಯಾವ ಉದ್ದೇಶಕ್ಕೆ ಎಂದು ನಮಗಂತೂ ಅರ್ಥವಾಗುತ್ತಿಲ್ಲ. ನಾನು ನಿಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ಗಡಿನಾಡು ಅಭಿವೃದ್ಧಿ ಪ್ರದೇಶಗಳಿಗೆ ಕೊಟ್ಟಿರತಕ್ಕ 25 ಲಕ್ಷ ರೂಪಾಯಿಗಳು ಏನೇನೂ ಸಾಲದು. ಒಂದೊಂದು ವಿಧಾನ ಸಭಾ ಕ್ಷೇತ್ರಕ್ಕೆ 8-9 ಲಕ್ಷ ರೂಪಾಯಿಗಳು ಬರುತ್ತವೆ. ಇದು ಯಾವ ಕಡೆಗೆ ಸಾಕಾಗುತ್ತದೆ? ಆದ್ದರಿಂದ, ತಾವು ದಯಮಾಡಿ ಇದನ್ನು ಪುನರ್ ಪರಿಶೀಲನೆ ಮಾಡಿ, ಹೆಚ್ಚಿನ ದುಡ್ಡನ್ನು ಕೊಡತಕ್ಕ ಭರವಸೆಯನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:-ಸನ್ಮಾನ್ಯ ಅಧ್ಯಕ್ಷರೇ, ಪೂರಕ ಬೇಡಿಕೆಗಳ ಬಗ್ಗೆ ಸಾಕಷ್ಟು ಚರ್ಚೆ ಮತ್ತು ಸಾಕಷ್ಟು ಬೆಳಕನ್ನು ಸನ್ಮಾನ್ಯ ಸದಸ್ಯರಾದ ಏಕಾಂತಯ್ಯನವರು ಹಾಗೂ ದೇಶಪಾಂಡೆಯವರು.....

ಶ್ರೀ ಸಿ. ಬೈರೇಗೌಡ:-ನಮಗೂ ಎರಡು ನಿಮಿಷ ಮಾತನಾಡಲು ಅವಕಾಶ ಕೊಡಿ.

ಶ್ರೀ ವಾಟಾಳ್ ನಾಗರಾಜ್:- 5 ನಿಮಿಷದ ಮೇಲೆ ತೆಗೆದುಕೊಳ್ಳುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:- ತಾವು ದಯಮಾಡಿ ಸಹಕರಿಸಬೇಕು.

ಅಧ್ಯಕ್ಷರು:-ಈಗಾಗಲೇ ಸಾಕಷ್ಟು ಮಾತನಾಡಿದ್ದಾರೆ. ಈ ವಿಧೇಯಕ ಆ ಸದನಕ್ಕೂ ಹೋಗಬೇಕು. ಆದ್ದರಿಂದ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ. ಹರ್ಷಕುಮಾರಗೌಡ:- ಶಾಸಕರಿಗೆ ಬರುತ್ತಿರುವ ಸಂಬಳ ಬಹಳ ಕಡಿಮೆ. ಏಕೆಂದರೆ ಮಂತ್ರಿಗಳಿಗೆ ಬೇರೆ ರೀತಿ ಟಿ.ಎ. ಡಿ.ಎ. ಕೊಡುತ್ತಿದ್ದಾರೆ. ಶಾಸಕರಿಗೇ ಬೇರೆ ರೀತಿ ಕೊಡುತ್ತಿದ್ದಾರೆ, ಶಾಸಕರಿಗೂ ಹೆಚ್ಚು ಕೊಡಬೇಕು. ನಾವು, ಕಾರಿಗೆ ಡ್ರೈವರಿಗೆ ಇಟ್ಟುಕೊಳ್ಳಬೇಕು. ನಮಗೆ ತೊಂದರೆಯಾಗುತ್ತಿದೆ.

ಶ್ರೀ ವೀರಪ್ಪ ಮೊಯಿಲಿ: ತಾವು ಅನಂತರ ಮಾತನಾಡಬಹುದು. ಅವಕಾಶ ಇದೆ.

ಮಾನ್ಯ ಅಧ್ಯಕ್ಷರೇ, ಪೂರಕ ಬೇಡಿಕೆಗಳು ಏನೂ ಹೊಸದಲ್ಲ.

(ಗೊಂದಲ)

ನಾವು ಇನ್ನು 8ನೇ ತಾರೀಖಿನವರೆಗೂ ಭೇಟಿಯಾಗುತ್ತಿದ್ದೇವೆ. ಚರ್ಚೆ ಮಾಡಬಹುದು. ಅವಕಾಶ ಇದೆ. ನಾಳೆ ಚರ್ಚೆ ಮಾಡೋಣ. ಬೇರೆ ಬೇರೆ ಸಬ್ಜಕ್ಟ್‌ಗಳಲ್ಲಿ ಚರ್ಚೆಗೆ ಅವಕಾಶ ಇದೆ. ಯಾವ ಸಬ್ಜಕ್ಟ್ ಇದ್ದರೂ ಕೂಡ you will have an opportunity.

ನಾಳೆ ನಾಳಿದ್ದು ಮಾತನಾಡಬಹುದು. ಮಾನ್ಯ ಅಧ್ಯಕ್ಷರೇ, ಪೂರಕ ಬೇಡಿಕೆಗಳು ಹೊಸದೇನೂ ಅಲ್ಲ. ಈಗ ನಾನು ಮಾನ್ಯ ದೇಶಪಾಂಡೆಯವರು ಮತ್ತು ಏಕಾಂತಯ್ಯನವರು ಹೇಳಿದಂಥ ಒಂದು ಮಾತನ್ನು ಒಪ್ಪುತ್ತೇವೆ. ಕೆಲವು ಆಂಟಿಸಿಪೇಟ್ ಮಾಡಬೇಕು. ಬಜೆಟ್ ಎಸ್ಟಿಮೇಟ್ಸ್ ತಯಾರು ಮಾಡುವಾಗ ಆ ವರ್ಷದಲ್ಲಿ ಕೆಲವು ಅಂಟಿಸಿಪೇಟ್ ತಂದು ಮಾಡಿದ್ದರೆ ಜಾಣತನದಿಂದ ಅದನ್ನು ಸೇರಿಸಿದ್ದರೆ ಪೂರಕ ಬೇಡಿಕೆಗಳನ್ನು ತಪ್ಪಿಸುವುದಕ್ಕೆ ಸಾಧ್ಯವಿದೆ. ಕೆಲವು ಐಟಂಗಳಲ್ಲಿ ಸಾಧ್ಯವಿದೆ. ಆದರೆ ಫ್ಲಡ್ಸ್ ಬರುತ್ತದೆ; ಕೆಲಾಮಿಟೀಸ್ ಬರುತ್ತದೆ. ಮತೀಯ ಗಲಭೆಗಳು ಬರುತ್ತದೆ, ಹೀಗೆ ಅನೇಕ ಐಟಂಗಳಲ್ಲಿ ಕೆಲವು ಸಾರಿ ಅಂಟಿಸಿಪೇಟ್ ಮಾಡಿರುವುದಿಲ್ಲ. ಆದರ ದಿಸೆಯಿಂದ ಇವು ಬರುತ್ತವೆ. ತಾವೇನು ಸಲಹೆ ಕೊಟ್ಟಿದ್ದೀರಿ ಅದನ್ನು ಸ್ವೀಕಾರ ಮಾಡುತ್ತೇವೆ. ಮುಂದೆ ಬರತಕ್ಕಂಥ ದಿವಸಗಳಲ್ಲಿ ಶಿಸ್ತು ಮತ್ತು ಸಂಯಮ ಪಾಲಿಸುವ ಬಗ್ಗೆ ನಾವು ಖಂಡಿತವಾಗಿ ತಮ್ಮ ಸೂಚನೆಯನ್ನು ಪರಿಪಾಲನೆ ಮಾಡುತ್ತೇವೆ. ಇವತ್ತು 1992-1993ನೇ ಸಾಲಿನಲ್ಲಿ ಒಟ್ಟು 3ನೇ ಕಂತಿನ ಪೂರಕ ಬೇಡಿಕೆಗಳು ಒಟ್ಟು 620.43 ಕೋಟಿ ರೂಪಾಯಿಗಳಲ್ಲಿ ಟೋಟಲ್ 8,771.60 ಕೋಟಿ ರೂಪಾಯಿಗಳಲ್ಲಿ ಒಟ್ಟು 620.43 ಕೋಟಿ ರೂಪಾಯಿಗಳು ಅಂದರೆ 7.61 ಪರ್ಸೆಂಟ್ ಬರುತ್ತದೆ. ಇಲ್ಲಿ ತಾವು ಇತಿಹಾಸ ನೋಡಿ ನಾನು ಯಾರನ್ನು ದೂರಲಿಕ್ಕೆ ಹೋಗುತ್ತಾ ಇಲ್ಲ. ತಾವು ಅಂಕಿ ಅಂಶಗಳನ್ನು ನೋಡಿ. ಅವರ ಕಾಲದಲ್ಲಿ ಅಂದರೆ 1982-83ರಲ್ಲಿ 27.63 ಪರ್ಸೆಂಟ್ ಇತ್ತು. ನೆಕ್ಸ್ಟ್ ಇಯರ್ 11.18 ಪರ್ಸೆಂಟ್ ಇತ್ತು. ಆಮೇಲೆ 1986-87ರಲ್ಲಿ 9.62 ಪರ್ಸೆಂಟ್ ಇತ್ತು. ಆಮೇಲೆ 1991-92ರಲ್ಲಿ 13.4 ಪರ್ಸೆಂಟ್ ಇತ್ತು. ಅದನ್ನು ಕಂಪೇರ್ ಮಾಡಿದರೆ, ಪೂರಕ ಡಿಮ್ಯಾಂಡ್ ಅನ್ನು ಏನು ತಮ್ಮ ಅವಗಾಹನೆಗೆ ಅಥವಾ ಮಂಜೂರಾತಿಗಾಗಿ ಒಪ್ಪಿಸಿದ್ದೇವೆ. That is the least, that means 7.61%.

ಇದರಲ್ಲಿ ಬಹಳಷ್ಟು ಅಮೌಂಟ್ ಅಡ್ಜಸ್ಟ್‌ಮೆಂಟ್ ಆಗತಕ್ಕಂಥದು ರೀ ಇಂಬರ್ಸ್‌ಮೆಂಟ್ ಮಾಡತಕ್ಕಂಥಾದ್ದು ಇದೆ. Net outgo, ಎಲ್ಲಾ ನೋಡಿದರೆ percentage, not even 3% it will come.

ಶ್ರೀ ವಾಟಾಳ್ ನಾಗರಾಜ್:- ತಾವು ಮುಗಿಸಿ ಸ್ವಾಮಿ, ನೀವು ನಮ್ಮ ಮೂರು ಜನರನ್ನು ಕಡೆಗಣಿಸಿದ್ದೀರಿ. ನ್ಯಾಯ ಒದಗಿಸಿಲ್ಲ.

ಅಧ್ಯಕ್ಷರು:- ವಾಟಾಳ್ ನಾಗರಾಜ್‌ರವರೇ, ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ತಮಗೆ ಗೊತ್ತಿದೆ. 1988-89, 89-90 ರ ಎಕ್ಸೆಸ್ ಎಕ್ಸ್‌ಪೆಂಡಿಚರ್‌ಗೆ ನಾವು ಅಪ್ರೋಪ್ರಿಯೇಷನ್ ಬಿಲ್ ತರುತ್ತೇವೆ. ಇಲ್ಲ, ಇದು ಜನತಾ ದಳದವರು ಮಾಡಿದ್ದು, ಆದ್ದರಿಂದ ನಾವು ಮಾಡುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ.Government is a continuous Government. Liability or asset the next Government will always own.

ಆದ್ದರಿಂದ ಇದರ ಬಗ್ಗೆ ಹೊಸದೇನೂ ಇಲ್ಲ. ಇದರಲ್ಲಿ ಅನೇಕ ಕಾರ್ಯಕ್ರಮಗಳು ಇವೆ.

SRI P.G.R. Sindhya:- We only wanted you to recollect the things which you

have spoken from this side when we had that sammelan,

Sri M. Veerappa Moily : Thanking you, for reminding it.

ಆದ್ದರಿಂದ ತಾವು ಇದನ್ನು ಮಂಜೂರು ಮಾಡಿಕೊಡಬೇಕೆಂದು ತಮ್ಮ ಮುಖೇನ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಗಡಿ ಪ್ರದೇಶದ ಅಭಿವೃದ್ಧಿ ಬಗ್ಗೆ 15 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ತಮಗೆ ಗಡಿ ಬಗ್ಗೆ ಅಪಾರವಾದ ಪ್ರೀತಿ ಇದೆ. ತಾವು ಒಂದು ಭರವಸೆ ಕೊಡಬೇಕು. ಗಡಿ ಪ್ರದೇಶಕ್ಕೆ ಇಟ್ಟಿರುವ ಹಣ ಸ್ವಲ್ಪ ಜಾಸ್ತಿ ಮಾಡಬೇಕೆಂದು ನಾನು ತಮಗೆ ಒಂದು ಸಲಹೆ ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಹೆಚ್ಚು ಮಾಡಲಿಕ್ಕೆ ಪ್ರಯತ್ನ ಮಾಡೋಣ.

ಅಧ್ಯಕ್ಷರು:- ಭರವಸೆ ಕೊಟ್ಟಿದ್ದಾರಲ್ಲಾ. ಈಗ ಪೂರಕ ಅಂದಾಜುಗಳ 3ನೇ ಕಂತಿನ ಪಟ್ಟಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ತಾವು ಮತಕ್ಕೆ ಹಾಕುತ್ತಿದ್ದೀರಿ. ನಾನು ತಮ್ಮ ಮುಖಾಂತರ ಇಡೀ ಸದನಕ್ಕೆ ಅಪೀಲು ಮಾಡುತ್ತಿದ್ದೇನೆ. Search your conscience and vote against the bashful expenditure of Rs. 1 crore 29 lakhs... The chief Minister, - The Ministers ಎಲ್ಲರೂ ವಿರೋಧ ಮಾಡಿದ್ದೀರಿ. ನೀವು ಇದನ್ನು ವಿರೋಧ ಮಾಡದೇ ಇದ್ದರೆ,I will have to say that you are all hypocrites just remove Bangarappa.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ 1992-93ನೇ ಸಾಲಿನ ಪೂರಕ ಅಂದಾಜು ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಬೇಡಿಕೆಗಳ ಸಂಖ್ಯೆ 1, 2, 4, 5, 7, 8, 10, 11, 14,15, 17 ರಿಂದ 22, 27ರಿಂದ 31, 33 ರಿಂದ 36, 38, 39, 40, 41, 43, 45, 47, 49, 50, 51, 53, 55, 56 ಹಾಗೂ 58ನೇ ಬೇಡಿಕೆಗಳ ಬಗ್ಗೆ ಸರ್ಕಾರದವರು ಸದರಿ ವೆಚ್ಚವನ್ನು ಸಂದಾಯ ಮಾಡುವಂತಾಗಲು ಪೂರಕ ಅನುದಾನ ಪಟ್ಟಿಯಲ್ಲಿ ಸೂಚಿಸಿರುವ ಮೊಬಲಗಿಗೆ ಮಿಗಾದಂತೆ ಇರುವ ಮೊತ್ತವನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳಿಗೆ ಮಂಜೂರಾತಿ ನೀಡಲಾಯಿತು.

ಶಾಸನ ರಚನಾ ಕಾರ್ಯಕಲಾಪಗಳು

ಎ) ವಿಧೇಯಕಗಳ ಮಂಡನೆಗೆ ಅನುಮತಿ ಕೋರಿಕೆ

1) ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ(ತಿದ್ದುಪಡಿ) ವಿಧೇಯಕ 1993

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹಾರನಹಳ್ಳಿ ಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ ''ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ(ತಿದ್ದುಪಡಿ) ವಿಧೇಯಕ, 1993ವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾಪ ಏನೆಂದರೆ ''ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ(ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.